ಸಂಪುಟ 01 । ಸಂಚಿಕೆ 200 ಗುರುವಾರ 24 ಸೆಪ್ಟೆಂಬರ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ರಾಷ್ಟ್ರೀಯ ವಿರಾಮಚಿಹ್ನೆ ದಿನ (National Punctuation Day) ಕಾಮಾ, ಪೂರ್ಣವಿರಾಮ, ಪ್ರಶ್ನಾರ್ಥಕ ಚಿಹ್ನೆ ಮುಂತಾದ ವಿರಾಮಚಿಹ್ನೆಗಳ ಸರಿಯಾದ ಬಳಕೆಯ ಮಹತ್ವವನ್ನು ತಿಳಿಸುವ ದಿನ. ಪ್ರತಿವರ್ಷ ಸೆಪ್ಟೆಂಬರ್ 24ರಂದು ಆಚರಿಸಲಾಗುತ್ತದೆ.

2) ವಿಶ್ವ ಸಮುದ್ರಯಾನ ದಿನ (World Maritime Day) ಸಮುದ್ರಯಾನ, ಹಡಗು ಸಾಗಣೆ ಮತ್ತು ಜಾಗತಿಕ ಸಮುದ್ರ ಸಾರಿಗೆಯ ಮಹತ್ವವನ್ನು ಗುರುತಿಸುವ ದಿನ.

3)ವಿಶ್ವ ಬಾಲಿವುಡ್ ದಿನ (World Bollywood Day) ಭಾರತೀಯ ಬಾಲಿವುಡ್ ಸಿನಿಮಾ, ಸಂಗೀತ, ನೃತ್ಯ ಮತ್ತು ಅದರ ಸಾಂಸ್ಕೃತಿಕ ಪ್ರಭಾವವನ್ನು ಆಚರಿಸುವ ದಿನ.

4) National Service Scheme (NSS) Day
NSS Day 2026 ಅನ್ನು ಸೆಪ್ಟೆಂಬರ್ 24, 2026 ರಂದು ಆಚರಿಸಲಾಗುತ್ತದೆ. ಓಖಖ ಅಧಿಕೃತ ಮಾಹಿತಿಯ ಪ್ರಕಾರ ಪ್ರತಿವರ್ಷ ಸೆಪ್ಟೆಂಬರ್ 24ರಂದು ಓಖಖ ಆಚಿಥಿ ಆಚರಿಸಲಾಗುತ್ತದೆ.

ಸುಭಾಷಿತ

ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದಿಗೂ ಬೇಸರ ಎನಿಸುವುದಿಲ್ಲ.

– ಮಹಾತ್ಮಗಾಂಧಿ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಕುರಿತು ವಿಧಾನಸಭೆಯಲ್ಲಿ ವಾಕ್ಸಮರ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯಸರ್ಕಾರದ ಆರ್ಥಿಕ ಪರಿಸ್ಥಿತಿ ಕುರಿತ ವಿಚಾರದಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ ಶಾಸಕರ ನಡುವೆ ವಾಗ್ವಾದ ಇಂದು ವಿಧಾನಸಭೆಯಲ್ಲಿ ಜರುಗಿತು. ರೈತರ ಸಮಸ್ಯೆ ಮತ್ತು ಸಂಬಂಧಿತ ವಿಷಯಗಳ ಕುರಿತ ವಿಶೇಷ ಚರ್ಚೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾತನಾಡುತ್ತಾ ಬಳ್ಳಾರಿ ಚಲೋ ಪಾದಯಾತ್ರೆ ವಿಚಾರ ಪ್ರಸ್ತಾಪಿಸಿದರು.

ಅದಕ್ಕೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ರಿಜ್ವಾನ್ ಅರ್ಷದ್ ಅವರು ಪ್ರತಿಕ್ರಿಯಿಸಿ, ಬರದ ಬಗ್ಗೆ ಮಾತನಾಡಲಿ, ಪಾದಯಾತ್ರೆ ಅವರ ಪಕ್ಷದ ಕಾರ್ಯಕ್ರಮ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಈ ಹಂತದಲ್ಲಿ ಬಿಜೆಪಿ ಶಾಸಕರು ಹಾಗೂ ವಿಜಯೇಂದ್ರ ಅವರ ಬೆಂಬಲಕ್ಕೆ ನಿಂತು ಮಾತನಾಡಲು ಮುಂದಾದರು. ಆಗ ಕಾಂಗ್ರೆಸ್‌ನ ಶಾಸಕರು ಪ್ರತಿಯಾಗಿ ಮಾತನಾಡಲು ಮುಂದಾದಾಗ ಸದನದಲ್ಲಿ ಗದ್ದಲದ ಪರಿಸ್ಥಿತಿ ಉಂಟಾಯಿತು.ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ಮಾತನಾಡಿ, ಪಾದಯಾತ್ರೆಯನ್ನು ವೈಭವೀಕರಣ ಮಾಡುವ ಅಗತ್ಯವಿಲ್ಲ ಎಂದು ಹೇಳಿದರು.

ಆಗ ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರ ನಡುವೆ ಏರಿದ ದನಿಯಲ್ಲಿ ಮಾತಿನ ಚಕಮಕಿ ನಡೆದು ಸದನದ ಗದ್ದಲ, ಗೊಂದಲದ ಗೂಡಾಯಿತು.ವಿರೋಧಪಕ್ಷದ ನಾಯಕ ಆರ್. ಅಶೋಕ್, ಬಿಜೆಪಿ ಶಾಸಕರಾದ ಆರಗ ಜ್ಞಾನೇಂದ್ರ, ಸತೀಶ್ ರೆಡ್ಡಿ, ಡಾ.ಸಿ.ಎನ್.ಅಶ್ವತ್ಥ ನಾರಾಯಣ ಮೊದಲಾದವರು ಎದ್ದು ನಿಂತು ಮಾತನಾಡಲು ಮುಂದಾದರು. ಹಾಗೆಯೇ ಆಡಳಿತ ಪಕ್ಷದ ಶಾಸಕ ಕೋನರೆಡ್ಡಿ, ಸಚಿವರಾದ ಭೈರತಿ ಸುರೇಶ್, ಬಾಲಕೃಷ್ಣ, ರಿಜ್ವಾನ್ ಅರ್ಷದ್, ಚಲುವರಾಯಸ್ವಾಮಿ ಮೊದಲಾದವರು ಮಾತನಾಡಲು ಮುಂದಾದರು. ಆ ಹಂತದಲ್ಲಿಗೊಂದಲದ ವಾತಾವರಣ ಸೃಷ್ಟಿಯಾಯಿತು.



ರಿಜ್ವಾನ್ ಅರ್ಷದ್ ಮಾತನಾಡಿ, ಪಾದಯಾತ್ರೆ ಸಂದರ್ಭದಲ್ಲಿ ನೀವು ಬರಪರಿಸ್ಥಿತಿ, ರೈತರ ಸಮಸ್ಯೆ ಬಗ್ಗೆ ಪ್ರಸ್ತಾಪಿಸದೇ ಸಚಿವರ ರಾಜೀನಾಮೆ ಬಗ್ಗೆ ಒತ್ತಾಯ ಮಾಡಿದ್ದೀರಿ ಎಂದು ಛೇಡಿಸಿದರು. ಆಗ ಅಶೋಕ್‌ರವರು, ಆರ್ಥಿಕ ಇಲಾಖೆ ಪತ್ರ ಬರೆದಿದೆ. ಒಂದು ನಯಾಪೈಸೆ ಇಲ್ಲ. ಅದು ಏಕೆ ಹೊರಗೆ ಬಂತು? ಮೊದಲು ನಿಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ ಎಂದು ಹೇಳಿದರು. ಬಾಲಕೃಷ್ಣ ಮಾತನಾಡಿ, ಆರ್ಥಿಕ ಸಂಕಷ್ಟದ ವಿಚಾರ ಮಾತನಾಡುವುದು ಸರಿಯಲ್ಲ. ಅವರು ಸತ್ಯ ಹೇಳಿದರೆ ಕುಳಿತುಕೊಳ್ಳಬಹುದು ಎಂದರು.

ವಿಜಯೇಂದ್ರ ಮಾತನಾಡಿ, ಆರ್ಥಿಕ ಇಲಾಖೆ ಪತ್ರ ಬರೆದಿರುವುದರಿಂದ ಚರ್ಚೆ ಮಾಡುತ್ತಿದ್ದೇವೆ. ರಾಜಕೀಯ ಮಾಡುತ್ತಿಲ್ಲ. ಬಿಪಿಎಲ್ ಕಾರ್ಡನ್ನು ಕಡಿತ ಮಾಡಲಾಗಿದೆ. ವಿಕಲಚೇತನರ ಮಾಸಾಶನ ಸರಿಯಾಗಿ ನೀಡುತ್ತಿಲ್ಲ ಎಂದು ಆರೋಪಿಸಿದರು.

ಸುನೀಲ್‌ಕುಮಾರ್ ಮಾತನಾಡಿ, ಆರ್ಥಿಕ ಇಲಾಖೆ ಪತ್ರದ ಬಗ್ಗೆ ಒಂದು ಸಾಲಿನಲ್ಲಿ ಹೇಳುವುದಾದರೆ ದಿವಾಳಿ ಸರ್ಕಾರದ ಕುಬೇರ ಮುಖ್ಯಮಂತ್ರಿ ಎಂದಾಗುತ್ತದೆ. ಅಷ್ಟು ಅರ್ಥ ಮಾಡಿಕೊಂಡರೆ ನಾಲ್ಕು ಪುಟ ಓದುವ ಅಗತ್ಯವಿಲ್ಲ ಎಂದರು. ಸಚಿವ ನರೇಂದ್ರಸ್ವಾಮಿಯವರು ಮಾತನಾಡಿ, ಒಂದು ವಿಚಾರದ ಬಗ್ಗೆ ಮಾತ್ರ ಪ್ರಸ್ತಾಪವಾಗಿದೆ ಎಂದು ಹೇಳಲು ಮುಂದಾದರು. ಗದ್ದಲದಲ್ಲಿ ಏನು ಹೇಳುತ್ತಿದ್ದಾರೆಂಬುದೇ ಕೇಳಿಸಲಿಲ್ಲ. ಬಾಲಕೃಷ್ಣ ಅವರು ಮತ್ತೆ ಮಾತನಾಡಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನವಾಗುತ್ತಿದೆ. ಅಭಿವೃದ್ಧಿ ಕಾರ್ಯಗಳು ನಿಂತಿಲ್ಲ. ಪಿಂಚಣಿಯನ್ನೂ ಕೊಡುತ್ತಿದ್ದೇವೆ. ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ನಿಲ್ಲಿಸುತ್ತಿದ್ದೇವೆ ಎಂದು ಸಮರ್ಥಿಸಿಕೊಂಡರು.

ಅಶೋಕ್ ಮಾತನಾಡಿ, ಹಣಕಾಸು ಇಲಾಖೆ ಬರೆದಿರುವ ಪತ್ರ ಗೊತ್ತಿಲ್ಲವೇ? ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಬಂದಾಗ ದಿವಾಳಿಯಾಗಿದೆ ಎಂಬ ಪತ್ರ ಹೊರಬಂದಿದೆ. ಹಾಗಿದ್ದರೆ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಸರ್ಕಾರವನ್ನು ಪಾಪರ್ ಮಾಡಿ ಬಿಟ್ಟುಹೋಗಿದ್ದರೇ? ಎಂದು ಪ್ರಶ್ನಿಸಿದರು.ಈ ಹಂತದಲ್ಲಿ ಮತ್ತೆ ಮಾತಿನ ಚಕಮಕಿ ನಡೆಯಿತು.ಬಾಲಕೃಷ್ಣ ಮಾತನಾಡಿ, ಕೇಂದ್ರ ಸರ್ಕಾರದಿಂದ ಮೊದಲು ಅನುದಾನ ಬಿಡುಗಡೆ ಮಾಡಿಸಿ ಎಂದು ಛೇಡಿಸಿದರು.

ರಿಜ್ವಾನ್ ಅರ್ಷದ್ ಮಾತನಾಡಿ, ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ಪತ್ರದಲ್ಲಿ ದಿವಾಳಿ ಎಂದು ಉಲ್ಲೇಖವಾಗಿಲ್ಲ ಎಂದು ಹೇಳಿದರು.ಹೀಗೆ ವಾಗ್ವಾದ ಮುಂದುವರೆದಾಗ ಸಭಾಧ್ಯಕ್ಷ ಜಿ.ಎಸ್.ಪಾಟೀಲ್ ಅವರು ವಿರೋಧಪಕ್ಷಗಳ ಆರೋಪಗಳ ಬಗ್ಗೆ ಸಭಾ ನಾಯಕರು, ಉಪನಾಯಕರು ಸಮರ್ಥನೆ ಮಾಡಿಕೊಳ್ಳುತಾರೆ. ಪದೇಪದೇ ಮಾತನಾಡಿದರೆ ಹೇಗೆ ಎಂದು ಹೇಳಿ ವಿಜಯೇಂದ್ರ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರು.

ಖಾಲಿ ಚೊಂಬು, ಚಿಪ್ಪು ಹಿಡಿದು ವಿಪಕ್ಷ ಸದಸ್ಯರ ಪ್ರತಿಭಟನೆ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯ ಸರ್ಕಾರದ ಆರ್ಥಿಕ ನಿರ್ವಹಣೆಯನ್ನು ಪ್ರಶ್ನಿಸಿ ಪ್ರತಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ವಿಧಾನಸೌಧದ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಖಾಲಿ ಚೊಂಬು ಹಾಗೂ ತೆಂಗಿನಕಾಯಿ ಚಿಪ್ಪುಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ರಾಜ್ಯದ ಖಜಾನೆ ಖಾಲಿಯಾಗಿದೆ, ಸರ್ಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ ಎಂದು ಆರೋಪಿಸಿದ ಪ್ರತಿಪಕ್ಷ ನಾಯಕರು,



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಚಿವರಾದ ಸುನೀಲ್ ಕುಮಾರ್, ಎಸ್.ಸುರೇಶ್ ಕುಮಾರ್, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಬಿಜೆಪಿ, ಜೆಡಿಎಸ್ ಸದಸ್ಯರು ಭಾಗವಹಿಸಿದ್ದರು.

ಪಾಪರ್ ಸರ್ಕಾರದ ಘೋಷಣೆ: ಖಾಲಿ ಚೊಂಬುಗಳನ್ನು ಹಿಡಿದುಕೊಂಡು ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಆರ್ಥಿಕತೆ ನಿರ್ವಹಿಸುವಲ್ಲಿ ಸರ್ಕಾರ ವಿಫಲ, ಡಿಕೆಶಿ ವಿಫಲ, ಪಾಪರ್ ಸರ್ಕಾರ ಎಂಬ ಘೋಷಣೆಗಳೊಂದಿಗೆ ಆಕ್ರೋಶ ವ್ಯಕ್ತಪಡಿಸಿದರು.ಡಿ.ಕೆ.ಶಿವಕುಮಾರ್ ಅವರ ಘೋಷಣೆಗಳು ಬೋಗಸ್, ಅವರ ಸಂಪುಟವೂ ಬೋಗಸ್ ಸಂಪುಟ ಎಂದು ಪ್ರತಿಪಕ್ಷ ಸದಸ್ಯರು ಟೀಕಿಸಿದರು. ಆರ್.ಅಶೋಕ್ ಮಾತನಾಡಿ, ಮುಖ್ಯ ಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರಿಗೆ ಆರ್ಥಿಕ ಇಲಾಖೆ ಮೇಲೆಯೇ ನಿಯಂತ್ರಣ ಇಲ್ಲ ಎಂದು ಆರೋಪಿಸಿದರು.

4ನೇ ಪುಟಕ್ಕೆ

ಬಡ ವಿದ್ಯಾರ್ಥಿಗಳಿಗೆ ಉಚಿತ ಸ್ಪರ್ಧಾತ್ಮಕ ಪುಸ್ತಕ ವಿತರಣೆ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಗ್ರಾಮೀಣ ಭಾಗದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಉದ್ದೇಶದಿಂದ ವಿಶ್ವಜ್ಞಾನಿ ಸ್ಪರ್ಧಾತ್ಮಕ ತರಬೇತಿ ಕೇಂದ್ರದಲ್ಲಿ 100 ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಪರ್ಧಾತ್ಮಕ ಪುಸ್ತಕಗಳನ್ನು ವಿತರಿಸಲಾಯಿತು.

ವಿಶ್ವಜ್ಞಾನಿ ಸ್ಪರ್ಧಾತ್ಮಕ ತರಬೇತಿ ಕೇಂದ್ರದಲ್ಲಿ ಓದುತ್ತಿರುವ 100 ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶರಣಗೌಡ ಗುರಿಕರ್ ಅವರು ತಮ್ಮ ಸಹೋದರ ಹಾಗೂ ಬೆಂಗಳೂರಿನ ಪೊಲೀಸ್ ಸಬ್ಇನ್‌ಸ್ಪೆಕ್ಟರ್ ಹನುಮನಗೌಡ ಪೊಲೀಸ್ ಪಾಟೀಲ್ ಅವರು ಬರೆದಿರುವ ಪರಮ್ ಪುಸ್ತಕವನ್ನು ಉಚಿತವಾಗಿ ವಿತ–



ರಿಸಿದರು.ಈ ವೇಳೆ ಮಾತನಾಡಿದ ಶರಣಗೌಡ ಗುರಿಕರ್, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಆಸಕ್ತಿ ಮೂಡಿಸುವುದು ಹಾಗೂ ಅಗತ್ಯ ಅಧ್ಯಯನ ಸಾಮಗ್ರಿಗಳನ್ನು ಒದಗಿಸುವುದು ಮುಖ್ಯವಾಗಿದೆ.

ವಿದ್ಯಾರ್ಥಿಗಳು ಪುಸ್ತಕಗಳನ್ನು ಸದುಪಯೋಗಪಡಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಶಿಕ್ಷಕ ಜಮದಗ್ನಿ, ವಿಶ್ವಜ್ಞಾನಿ ಸ್ಪರ್ಧಾತ್ಮಕ ತರಬೇತಿ ಕೇಂದ್ರದ ನಿರ್ದೇಶಕ ದುರಗಪ್ಪ ಬಂಡೇಭಾವಿ, ಈಶ್ವರ್ ಗುರುಗುಂಟಾ, ಕನಕರಾಯ ಈಚನಾಳ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

'ಟಿವಿ ಶೀವಿ' ಪತ್ರಿಕೆ ಪುನರಾರಂಭ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ (ರಿ) ನ ಆಂತರಿಕ ಪ್ರಸಾರದ ದ್ವೈಮಾಸಿಕ ಪತ್ರಿಕೆ 'ಟಿವಿ ಶೀವಿ' ಅಂತರಾಳದ ಮಹಾ ಧ್ವನಿಯನ್ನು ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕರಾದ ಎನ್ ಆರ್ ರಮೇಶ್ ರವರು ಪುನರಾರಂಭಗೊಳಿಸಿದರು.

ಪತ್ರಿಕೆಯ ಸಂಪಾದಕರಾದ ಹಿರಿಯೂರು ರಾಘವೇಂದ್ರ, ಕೆಟಿವಿಎ ಅಧ್ಯಕ್ಷ ಗಣೇಶ್‌ರಾವ್ ಕೇಸರ್ಕರ್, ಚಲನಚಿತ್ರ ಕಲಾವಿದ ಶ್ರೀನಗರ ಕಿಟ್ಟಿ, ಗೌರವಾಧ್ಯಕ್ಷರಾದ ಪದ್ಮಾ ವಾಸಂತಿ, ಕಾರ್ಯದರ್ಶಿ ಬೆಳ್ಳಿಚುಕ್ಕಿ ವೀರೇಂದ್ರ, ರೇಣು ಶಿಕಾರಿ ಎನ್ ಟಿ ರಾಮಸ್ವಾಮಿ, ಡಾ. ಎ ಆರ್ ಗೋವಿಂದಸ್ವಾಮಿ ಅವರುಗಳು ಉಪಸ್ಥಿತರಿದ್ದರು. ಪತ್ರಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಎನ್



ಆರ್ ರಮೇಶ್ "ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ, ಟೆಲಿವಿಷನ್ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ (ರಿ), ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ (ರಿ)ಎರಡೂ ಸಂಸ್ಥೆಗಳು ಒಂದಾಗಿ ಕೆಲಸ ಮಾಡಿದರೆ ಏನು ಬೇಕಾದರೂ ಸಾಧಿಸಬಹುದು " ಎಂದು ಹಿತವಚನ ನುಡಿದರು.

ಪತ್ರಿಕೆ ಪುನರಾರಂಭವಾಗಿದ್ದಕ್ಕೆ ಕೆಟಿಎದ ಎಲ್ಲ ಪದಾಧಿಕಾರಿಗಳಿಗೂ, ಚಲನಚಿತ್ರ ನಿರ್ದೇಶಕರು, ಕಲಾವಿದರು,ಸಾಹಿತಿಗಳು ಪತ್ರಿಕೆ ಸಂಪಾದಕರಾದ ರಾಘವೇಂದ್ರ ಹಿರಿಯೂರು ಅವರ ನೇತೃತ್ವದಲ್ಲಿ ಪತ್ರಿಕೆ ಯಶಸ್ಸು ಕಾಣಲೆಂದು ಕಲಾಪೋಷಕರ ಮತ ಸಿದ್ದನಕೊಳ್ಳದ ಡಾ.ಶಿವಕುಮಾರ ಮಹಾಸ್ವಾಮಿಗಳು, ಚಲನಚಿತ್ರ ಹಿರಿಯ ಪತ್ರಕರ್ತರಾದ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ನಿರ್ದೇಶಕ ನಿರ್ಮಾಪಕರಾದ ಲೋಕೇಶ ವಿದ್ಯಾಧರ, ಅರವಿಂದ ಮುಳಗುಂದ, ರೇಣುಕುಮಾರ ಸಂಸ್ಥಾನಮತ, ಪತ್ರಿಕಾ ಸಂಪಾದಕರುಗಳಾದ ಗಣಪತಿ ಗಂಗೊಳ್ಳಿ, ಲಕ್ಷ ಮಣ ಬಾರಕೇರ, ಅಶೋಕ ತೋಟದ, ಕಲಾವಿದರಾದ ವೀರೇಶ ಪುರವಂತರ, ಸಂಗನಗೌಡ ಕುರುಡಗಿ, ರವೀಂದ್ರ ರಾಮದುರ್ಗಕರ, ವೀರಣ್ಣ ವಿಠಲಾಪೂರ, ಛಾಯಾಗ್ರಾಹಕ ಶರಣು ಸುಗ್ನಳ್ಳಿ, ಅಭಿ ಕ್ರಿಯೇಷನ್ಸ್ ನಿರ್ಮಾಪಕರಾದ ಶ್ರೀಮತಿ ವಿದ್ಯಾ ಗಂಜಿಹಾಳ, ಶ್ರೀಮತಿ ಸಂಗೀತಾ ಚಂದ್ರಶೇಖರ ಆಡಿನ, ಶ್ರೀಮತಿ ರೇಖಾ ಸಿದ್ದುಕೃಷ್ಣ ಢೇಕಣಿ ಮೊದಲಾದವರು ಶುಭಕೋರಿದ್ದಾರೆ.

ವಾಸಕ್ಕೆ ಯೋಗ್ಯವಾದ ಭೂಮಿ ಮಂಜೂರು ಮಾಡುವಂತೆ ಕರವೇ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ವಾಜಪೇಯಿ ನಗರ ನಿವೇಶನ ಯೋಜನೆಯಡಿ ಪುರಸಭೆ ವ್ಯಾಪ್ತಿಯಲ್ಲಿ ಬಡಜನರು ವಾಸಿಸಲು ಯೋಗ್ಯವಾದ ಭೂಮಿ ಮಂಜೂರು ಮಾಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ತಾಲೂಕ ಅಧ್ಯಕ್ಷ ಜಿಲಾನಿ ಪಾಷಾ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು .

ಪುರಸಭೆ ವ್ಯಾಪ್ತಿ ಸ.ನಂ.286 ರಲ್ಲಿ ವಾಜಪೇಯಿ ನಗರ ನಿವೇಶನ ಯೋಜನೆಯಡಿ ಮಂಜೂರು ಮಾಡಿರುವ ಭೂಮಿಯು ಗುಡ್ಡಗಾಡು ಪ್ರದೇಶವಾಗಿದ್ದು, ದೊಡ್ಡ ದೊಡ್ಡ ಕಲ್ಲು ಬಂಡೆಗಳಿಂದ ಕೂಡಿದ್ದು, ಸಾರ್ವಜನಿಕರು ಹಾಗೂ ಫಲಾನುಭವಿಗಳು ವಾಸ ಮಾಡಲು ಯಾವುದೇ ರೀತಿಯಿಂದಲೂ ಯೋಗ್ಯವಾಗಿರುವುದಿಲ್ಲ. ಇಂತಹ ವಾಸಕ್ಕೆ ಯೋಗ್ಯವಾಗಿರದ ಭೂಮಿಯನ್ನು ಮಂಜೂರು ಮಾಡಿದರೆ ಅಲ್ಲಿ ಜನ ವಾಸ ಮಾಡುವುದಿಲ್ಲ, ಬದಲಿಗೆ ಕಟ್ಟಿದ ಮನೆಗಳು ಪಾಳುಬೀಳುತ್ತವೆ. ವಾಸಕ್ಕೆ ಯೋಗ್ಯವಾಗಿರದ



ಭೂಮಿಯನ್ನು ಮಂಜೂರು ಮಾಡಿರುವ ಹಿಂದಿನ ಉದ್ದೇಶವಾದರು ಏನು ಎಂಬ ಪ್ರಶ್ನೆ ಕಾಡುತ್ತಿದೆ..

ಈ ಹಿಂದೆ ಪುರಸಭೆ ಮುಖ್ಯಾಧಿಕಾರಿಗಳು ದಿನಾಂಕ: 11-12-2023ರಂದು ತಹಶೀಲ್ದಾರ–ರಿಗೆ ಪತ್ರ ಬರೆದು ವಾಜಪೇಯಿ ನಗರ ನಿವೇಶನ ಯೋಜನೆಗೆ ಮಂಜೂರು ಮಾಡಿರುವ ಭೂಮಿ ವಾಸಕ್ಕೆ ಯೋಗ್ಯವಾಗಿಲ್ಲ. ವಾಸಕ್ಕೆ ಯೋಗ್ಯವಾದ ಭೂಮಿ ಮಂಜೂರು ಮಾಡಬೇಕೆಂದು ಪತ್ರ ಬರೆದಿದ್ದರು. ಆದರೆ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಸದರಿ ಪ್ರದೇಶದಲ್ಲಿ ಸಮತಟ್ಟಾದ ಜಾಗದ ಕೊರತೆ, ರಸ್ತೆ ಸಂಪರ್ಕದ ಸಮಸ್ಯೆ, ಕುಡಿಯುವ ನೀರು, ವಿದ್ಯುತ್ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸಹ ಸಾಧ್ಯವಿಲ್ಲ. ಬಡ ಹಾಗೂ ನಿವೇಶನ ರಹಿತ ಕುಟುಂಬಗಳು ಅಲ್ಲಿ ಮನೆ ನಿರ್ಮಿಸಿ ವಾಸಿಸಲು ಅಸಾಧ್ಯ. ಸರ್ಕಾರದ ಉದ್ದೇಶವು ಬಡವರಿಗೆ ಸುರಕ್ಷಿತ ಹಾಗೂ ಮೂಲಭೂತ ಸೌಲಭ್ಯಗಳಿರುವ ವಸತಿ ಒದಗಿಸುವುದಾಗಿದ್ದು ಹೊರತು ಬೇಕಾಬಿಟ್ಟಿಯಾಗಿ ವಾಸಕ್ಕೆ ಯೋಗ್ಯ ವಾಗಿರದ ಭೂಮಿ ಮಂಜೂರು ಮಾಡಿ ಕೈತೊಳೆದು ಕೊಂಡರೆ ಸರ್ಕಾರದ ಉದ್ದೇಶ ನೆಲಕ್ಕಚ್ಚುತ್ತದೆ.

ಪ್ರಸ್ತುತ ಫಲಾನುಭವಿಗಳ ಆಯ್ಕೆ ಪಟ್ಟಿಯೂ ದ್ವೇಷ ಪೂರಿತವಾಗಿದ್ದು, ಶ್ರೀಮಂತರು ಹಾಗೂ ಮನೆ ಉಳ್ಳವರನ್ನು ಆಯ್ಕೆ ಮಾಡಲಾಗಿದೆ. ಸದರಿ ಆಯ್ಕೆ ಪಟ್ಟಿಯಲ್ಲಿರುವ ಕಡು ಬಡವರು ಹಾಗೂ ಮನೆ ಇಲ್ಲದವರನ್ನು ಗುರುತಿಸಿ ಪಟ್ಟಿಯನ್ನು ಪುನಃ ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಹಾಗೂ ಪುರಸಭೆ ವ್ಯಾಪ್ತಿಯೊಳಗೆ ಅಥವಾ ಸಮೀಪದ ಪ್ರದೇಶದಲ್ಲಿ ರಸ್ತೆ, ನೀರು, ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಹೊಂದಿರುವ ವಾಸಕ್ಕೆ ಯೋಗ್ಯವಾದ ಭೂಮಿ ಮರು ಮಂಜೂರು ಮಾಡಬೇಕು, ಮುಂದಿನ 2 ತಿಂಗಳಲ್ಲಿ ವಾಸಕ್ಕೆ ಯೋಗ್ಯವಾದ ಭೂಮಿಯನ್ನು ಮಂಜೂರು ಮಾಡಿ ಅರ್ಹ ಫಲಾನುಭವಿಗಳಿಗೆ ಹಕ್ಕು ವಿತರಣೆ ಮಾಡುತ್ತೇವೆಂದು ಭರವಸೆ ನೀಡಿದ್ದರು.

ಒಂದುವರೆ ತಿಂಗಳಾಗುತ್ತ ಬಂದರು ಇಲ್ಲಿಯವರೆಗೆ ಯಾವುದೇ ಹೇಳಿಕೊಳ್ಳುವಂತಹ ಬೆಳವಣಿಗೆಗಳು ಕಂಡು ಬಂದಿಲ್ಲ. ಆದ್ದರಿಂದ ಬಡವರ ಕೂಗಿಗೆ ಧ್ವನಿಯಾಗಿ ಬಡ ಜನರರಿಗೆ ಆಸರೆಯನ್ನು ಒದಗಿಸಿ ಕೊಡಬೇಕೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಅಜ್ಮಿರ್ ಸೇಖ್ , ರವಿಕುಮಾರ್ ಬರಗುಡಿ , ಮೋಸಿನ್ ಖಾನ್ , ಮರಿಯಪ್ಪ , ಅಲ್ಲಾವುದ್ದೀನ್ , ಶಬ್ಬೀರ್ ಫುಲೆವಾಲೆ , ಜಾಫರ್ , ರಹಿಂ , ಇಲಿಯಾಸ್ , ಶಿಹಾನ್ , ವೀರೇಶ್ ಐದನಾಳ್ , ಆಜೀಜ್ ಪಾಷಾ , ಅಮೀರಾ ಬೇಗಂ , ಹನುಮಪ್ಪ , ಹುಲುಗೆಮ್ಮ ,ನಿರ್ಮಲಾ , ಮಹಾಂತೇಶ್ ಸೇರಿದಂತೆ ಇತರರು ಇದ್ದರು .

ಸಾಹಿತ್ಯ ಸಿಂಚನ

ನದಿಯ ನಾದ

ಬೆಟ್ಟದ ಮಡಿಲಲ್ಲಿ ಹುಟ್ಟಿದ ನದಿ,
ಮೌನದೊಳಗೆ ಹಾಡೊಂದು ಹೊತ್ತು,
ಕಲ್ಲುಗಳ ನಡುವೆ ದಾರಿಯ ಹುಡುಕಿ,
ತನ್ನದೇ ರಾಗದಲ್ಲಿ ಸಾಗುತಿದೆ.

ಅಲೆಗಳ ಮೃದುವಾದ ನಾದದಲ್ಲಿ,
ಸಾವಿರ ಕನಸುಗಳ ಮಾತಿದೆ,
ತೀರದ ಮರಗಳ ನೆರಳಿನಲ್ಲಿ,
ಸಾವಿರ ನೆನಪುಗಳ ಹಾಡಿದೆ.

ಸೂರ್ಯನ ಕಿರಣಗಳು ತಾಕಿದಾಗ,
ಬೆಳ್ಳಿಯಂತೆ ಹೊಳೆಯುವ ಮುಖ,
ಚಂದ್ರನ ಬೆಳಕಲ್ಲಿ ಹರಿದಾಗ,
ನಕ್ಷತ್ರಗಳ ಜೊತೆಗಿನ ಸ್ನೇಹ.

ಅಡೆತಡೆಗಳು ಎದುರಾದರೂ,
ಹರಿವನ್ನು ಎಂದಿಗೂ ನಿಲ್ಲಿಸದು,
ದಾರಿ ಬದಲಾಗಬಹುದು ಆದರೆ,
ಗುರಿಯ ಕಡೆಗೆ ಸಾಗುವುದ ಮರೆಯದು.

ಬಾಯಾರಿದ ಭೂಮಿಗೆ ಜೀವವಾಗಿ,
ಹಸಿರಿನ ಕನಸಿಗೆ ಉಸಿರಾಗಿ,
ಹಳ್ಳಿಗಳ ಬದುಕಿಗೆ ಆಸರೆಯಾಗಿ,
ನದಿ ತನ್ನ ಪಯಣ ಮುಂದುವರಿಸುತ್ತದೆ.

ಅದರ ನಾದ ಕೇಳಿದ ಕ್ಷಣದಲ್ಲಿ,
ಮನದ ಗೊಂದಲವೆಲ್ಲ ಕರಗುತ್ತದೆ,
ನದಿಯಂತೆ ಜೀವನವೂ ಹರಿಯಲಿ,
ಸಾಗರದಂತೆ ಗುರಿಯೂ ಸಿಗಲಿ.

ನೇಪಾಳ ಪ್ರವಾಹ : ನಾಪತ್ತೆಯಾದ ಭಾರತೀಯರ ಪತ್ತೆಗೆ 1,200ಕ್ಕೂ ಹೆಚ್ಚು ಡಿಎನ್‌ಎ ಪ್ರೊಫೈಲ್ ಪರಿಶೀಲನೆ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ನೇಪಾಳದಲ್ಲಿ ಇತ್ತೀಚೆಗೆ ಸಂಭವಿಸಿದ ಹಠಾತ್ ಪ್ರವಾಹದಲ್ಲಿ ಸಾವನ್ನಪ್ಪಿದವರ ಗುರುತು ಪತ್ತೆ ಮಾಡಲು ಕಠ್ಮಂಡುವಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ವಿಧಿವಿಜ್ಞಾನ ತಂಡವು ಇದುವರೆಗೆ 3,000 ಡಿಎನ್‌ಎ ಮಾದರಿಗಳನ್ನು ಪರಿಶೀಲಿಸಿದ್ದು, 1,200ಕ್ಕೂ ಹೆಚ್ಚು ಡಿಎನ್‌ಎ ಪ್ರೊಫೈಲ್‌ಗಳನ್ನು ಗುರುತಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.



ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ದ್ವೈವಾರ್ಷಿಕ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು. ನೇಪಾಳದಲ್ಲಿ 275 ಮಂದಿ ಭಾರತೀಯರು ನಾಪತ್ತೆಯಾಗಿರುವ ಬಗ್ಗೆ ಈ ಹಿಂದೆ ಮಾಹಿತಿ ನೀಡಲಾಗಿತ್ತು. ಭಾರತೀಯ ವಿಧಿವಿಜ್ಞಾನ ತಂಡವು ಕಠ್ಮಂಡುವಿನ ಹಲವು ಪ್ರಯೋಗಾಲಯಗಳಲ್ಲಿ ನೇಪಾಳದ ಅಧಿಕಾರಿಗಳೊಂದಿಗೆ ಸಹಕರಿಸಿ ಡಿಎನ್‌ಎ ಮಾದರಿಗಳ ಪರಿಶೀಲನೆ ನಡೆಸುತ್ತಿದೆ. 3,000 ಮಾದರಿಗಳ ಪೈಕಿ 1,200ಕ್ಕೂ ಹೆಚ್ಚು ಡಿಎನ್‌ಎ ಪ್ರೊಫೈಲ್‌ಗಳನ್ನು ಸಿದ್ಧಪಡಿಸಲಾಗಿದೆ. ನಾಪತ್ತೆಯಾಗಿರುವ ಭಾರತೀಯರು ಹಾಗೂ ಇತರರ ಕುರಿತು ನೇಪಾಳದ ಅಧಿಕಾರಿಗಳಿಂದ ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ ಎಂದು ಜೈಸ್ವಾಲ್ ಹೇಳಿದರು. ಆಗಸ್ಟ್ 26ರಂದು ನೇಪಾಳ–ಟಿಬೆಟ್ ಗಡಿಯ ಸಮೀಪ ಉಂಟಾದ ಹಠಾತ್ ಪ್ರವಾಹವು ಉತ್ತರ ಮತ್ತು ಮಧ್ಯ ನೇಪಾಳದ ಹಲವು ಪಟ್ಟಣಗಳು ಹಾಗೂ ಗ್ರಾಮಗಳಿಗೆ ಭಾರಿ ಹಾನಿ ಮಾಡಿತ್ತು. ಭೋಟೆಕೋಶಿ ನದಿಯ ಪ್ರವಾಹದಿಂದ ಮನೆಗಳು, ವಾಹನಗಳು, ರಸ್ತೆಗಳು ಮತ್ತು ಸೇತುವೆಗಳು ಕೊಚ್ಚಿಹೋಗಿದ್ದವು. ಹಲವು ಜಲವಿದ್ಯುತ್ ಯೋಜನೆಗಳಿಗೂ ಹಾನಿಯಾಗಿತ್ತು.

ಯುವಜನರು, ಸಂಘಟನೆ ಮತ್ತು ರಾಜಕೀಯ ಭವಿಷ್ಯದ ಕುರಿತು ಚಿಂತನೆ

ಜಾಗೃತಾ ಮಹಿಳಾ ಸಂಘಟನೆಯ ಕಾರ್ಯಾಲಯದಲ್ಲಿ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಸಂವಾದ

❑ ನೈಜ್ಯ ದೆಸೆ ನ್ಯೂಸ್

ಇಂದು ಜಾಗೃತಾ ಮಹಿಳಾ ಸಂಘಟನೆಯ ಕಾರ್ಯಾಲಯದಲ್ಲಿ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನದ ವಿದ್ಯಾರ್ಥಿಗಳೊಂದಿಗೆ "ಸಂಘಟನೆ, ಯುವಜನರು ಮತ್ತು ರಾಜಕೀಯ" ಎಂಬ ಮಹತ್ವದ ವಿಷಯದ ಕುರಿತು ಅರ್ಥಪೂರ್ಣ ಸಂವಾದ ನಡೆಯಿತು. ಈ ಸಂವಾದದಲ್ಲಿ ರಾಯಚೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಜೆಶಾನ್ ಅಖಿಲ್ ಸಿದ್ದಿಕೀ ಅವರು ಭಾಗವಹಿಸಿ ವಿದ್ಯಾರ್ಥಿಗಳೊಂದಿಗೆ ವಿವಿಧ ಸಾಮಾಜಿ–ಕ ಹಾಗೂ ಸಾರ್ವಜನಿಕ ವಿಚಾರಗಳ ಕುರಿತು ಮುಕ್ತವಾಗಿ ವಿಚಾರ ವಿನಿಮಯ ನಡೆಸಿದರು.

ಸಮಾಜದಲ್ಲಿ ಬದಲಾವಣೆ ತರುವಲ್ಲಿ ಸಂಘಟನೆಗಳ ಪಾತ್ರ, ಯುವಜನರ ಸಾಮಾಜಿ–ಕ ಜವಾಬ್ದಾರಿ, ಸಾರ್ವಜನಿಕ ಬದುಕಿನಲ್ಲಿ ಯುವಜನರ ಸಕ್ರಿಯ ಭಾಗವಹಿಸುವಿಕೆ, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಯುವಕರ ಪಾತ್ರ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಅರ್ಥ–ಮಾಡಿಕೊಂಡು ಅವುಗಳ ಪರಿಹಾರಕ್ಕಾಗಿ ಕೈಗೊಳ್ಳಬಹುದಾದ ಪ್ರಯತ್ನಗಳ ಕು–



ರಿತು ಸಂವಾದದಲ್ಲಿ ಚರ್ಚಿಸಲಾಯಿತು. ರಾಜಕೀಯ ಮತ್ತು ಸಾರ್ವಜನಿಕ ಜೀವನದ ಕುರಿತು ಯುವಜನರಲ್ಲಿ ಇರುವ ಪ್ರಶ್ನೆಗಳು, ನಿರೀಕ್ಷೆಗಳು ಹಾಗೂ ಅನುಭವಗಳನ್ನು ಆಲಿಸುವುದರ ಜೊತೆಗೆ, ಸಮಾಜದ ವಿವಿಧ ವರ್ಗಗಳ ಸಮಸ್ಯೆಗಳನ್ನು ಅರ್ಥ–ಮಾಡಿಕೊಳ್ಳುವಲ್ಲಿ ಸಂಘಟನೆಗಳು ಮತ್ತು ಯುವಜನರ ನಡುವಿನ ಸಂವಾದದ ಮಹತ್ವದ ಕುರಿತು ಚರ್ಚೆ ನಡೆಯಿತು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿವಿಧ ವಿಚಾರಗಳ ಕುರಿತು ಪ್ರಶ್ನೆಗಳನ್ನು ಕೇಳಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ವಿದ್ಯಾರ್ಥಿಗಳ ಪ್ರಶ್ನೆಗಳು ಮತ್ತು ಚಿಂತನೆಗಳು ಸಂವಾದಕ್ಕೆ ಮತ್ತಷ್ಟು ಜೀವ ತುಂಬಿದವು. ಪುಸ್ತಕಗಳು ಮತ್ತು ತರಗತಿಯ ಅಧ್ಯಯನದ ಜೊತೆಗೆ ಸಮಾಜದ ನೈಜ ಬದುಕಿನ ಅನುಭವಗಳು ಹಾಗೂ ಸಾರ್ವಜನಿಕ ವಿಚಾರಗಳ ಕುರಿತು ನೇರವಾಗಿ ಚರ್ಚಿಸುವುದು ವಿದ್ಯಾರ್ಥಿಗಳ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಲು ಸಹಕಾರಿಯಾಗುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. ಯುವಜನರು ಕೇವಲ ಪ್ರೇಕ್ಷಕರಾಗಿ ಉಳಿಯದೆ, ಸಮಾಜದ ವಿಚಾರಗಳ ಕುರಿತು ಪ್ರಶ್ನಿಸುವ, ಚರ್ಚಿಸುವ ಮತ್ತು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳುವ ಸಕ್ರಿಯ ನಾಗರಿಕರಾಗಿ ರೂಪುಗೊಳ್ಳುವುದು ಮುಖ್ಯ. ಯುವಜನರ ಚಿಂತನೆಗಳಿಗೆ ಸೂಕ್ತ ವೇದಿಕೆ ಕಲ್ಪಿಸುವುದು ಹಾಗೂ ಅವರ ಪ್ರಶ್ನೆಗಳನ್ನು ಆಲಿಸುವುದು ಆರೋಗ್ಯಕರ ಪ್ರಜಾಸತ್ತಾತ್ಮಕ ಸಂವಾದಕ್ಕೆ ಅಗತ್ಯವಾಗಿದೆ.

ಇಂತಹ ಮುಕ್ತ ಸಂವಾದಗಳು ಯುವಜನರು, ಸಾಮಾಜಿಕ ಸಂಘಟನೆಗಳು ಮತ್ತು ಸಾರ್ವಜನಿಕ ಬದುಕಿನ ನಡುವೆ ಪರಸ್ಪರ ಅರಿವು ಮೂಡಿಸುವುದರ ಜೊತೆಗೆ, ಸಮಾಜದ ವಿವಿಧ ಸಮಸ್ಯೆಗಳನ್ನು ಹೊಸ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತವೆ.

ಈ ಅರ್ಥಪೂರ್ಣ ಹಾಗೂ ಚಿಂತನಾತ್ಮಕ ಸಂವಾದಕ್ಕೆ ಅವಕಾಶ ಕಲ್ಪಿಸಿದ ಜಾಗೃತಾ ಮಹಿಳಾ ಸಂಘಟನೆಯ ಶ್ರುತಿ ಹಾಗೂ ಚಿನ್ನಮ್ಮ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಧನ್ಯವಾದಗಳು. ಯುವಜನರ ಪ್ರಶ್ನೆಗಳಿಗೆ ಅವಕಾಶ ಇರಲಿ? ಚಿಂತನೆಗಳಿಗೆ ವೇದಿಕೆ ಸಿಗಲಿ? ಭಿನ್ನಾಭಿಪ್ರಾಯಗಳಿಗೆ ಗೌರವ ದೊರೆಯಲಿ? ಸಮಾಜದ ಭವಿಷ್ಯ ರೂಪಿಸುವ ಚರ್ಚೆಗಳಲ್ಲಿ ಯುವಜನರ ಧ್ವನಿ ಇನ್ನಷ್ಟು ಗಟ್ಟಿಯಾಗಲಿ.

ಕಲ್ಬುರ್ಗಿ ಜಿಲ್ಲಾಡಳಿತ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪ್ರತಿಮೆಯನ್ನು ಪುನಃ ನಿರ್ಮಾಣ ಮಾಡಿದದಿದ್ದರೆ ನಂಜನಗೂಡಿನಿಂದ ಪಾದಯಾತ್ರೆ ಸಿದ್ದು ಅಭಿಮಾನಿಗಳ ಘೋಷಣೆ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಸೆಪ್ಟೆಂಬರ್ 23 ಕಲ್ಬುರ್ಗಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪ್ರತಿಮೆಯನ್ನು ಅಲ್ಲಿನ ಸಿದ್ದು ಅಭಿಮಾನಿಗಳು ಅವರ ಕಂಚಿನ ಪ್ರತಿಮೆಯನ್ನು ನಿರ್ಮಾಣ ಮಾಡುವ ಮೂಲಕ ತಮ್ಮ ಅಭಿಮಾನವನ್ನು ತೋ–ರಿಸಿದರು ಅಲ್ಲಿನ ಜಿಲ್ಲಾಡಳಿತ ರಾತ್ರಿ ನಿರ್ಮಿಸಿದ್ದ ಸಿದ್ದರಾಮಯ್ಯನವರ ಪ್ರತಿಮೆಯನ್ನು ಬೆಳಿಗ್ಗೆ ಅವರ ಪ್ರತಿಮೆಯನ್ನು ತಿರುವು ಗೊಳಿಸಿರುವುದನ್ನು ಖಂಡಿಸಿ ಮತ್ತೆ ಅದೇ ಜಾಗದಲ್ಲಿ ಅವರ ಪ್ರತಿಮೆಯನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ.

ಮೈಸೂರು ನಂಜನಗೂಡು ಊಟಿ ರಸ್ತೆ ಹುಲ್ಲಳ್ಳಿ ಸರ್ಕಲ್ ನಲ್ಲಿ ಇಂದು ಡಾ. ಎಸ್ ಯತೀಂದ್ರ ಸಿದ್ದರಾಮಯ್ಯನವರ ಫೌಂಡೇಶನ್ ಅಧ್ಯಕ್ಷ ಕೆ ಎಸ್ ಸುಂಡಿ ರವಿಕುಮಾರ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ತಾಲೂಕು ದಂಡಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಫೌಂಡೇಶನ್ ಅಧ್ಯಕ್ಷ ರವಿಕುಮಾರ್ ನಂಜನಗೂಡು ತಾಲೂಕು ಲಾರಿ ಮಾಲೀಕರ ಸಂಘದ ಅಧ್ಯಕ್ಷ ವಿಶ್ವನಾಥ್ ಕುರುವ ಸಮಾಜದ ಮುಖಂಡರಾದ ಕುರಿಹುಂಡಿ ರಾಜು ರವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅವರ ಅಧಿಕಾರದ ಅವಧಿಯಲ್ಲಿ ಹಲವಾರು ಜನಪರ ಯೋಜನೆಗಳನ್ನು ಜಾ–ರಿಗೆ ತರುವ ಮೂಲಕ ರಾಜ್ಯದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿದಂತ ಹಿಂದುಳಿದ ವರ್ಗದ ಮಹಾನ್ ನಾಯಕ ಅವರ ಪ್ರತಿಮೆಯನ್ನು ಕಲ್ಬುರ್ಗಿ ಕೋರ್ಟ್ ಸರ್ಕಲ್ ನಲ್ಲಿ ಹಾಲಿನ ಸಿದ್ದರಾಮಯ್ಯನವರ ಅಭಿಮಾನಿಗಳು ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಿದರು ಸ್ಥಾಪನೆ ಮಾಡಿದ ಒಂದೇ ದಿನದಲ್ಲಿ ಅವರ ಪ್ರತಿಮೆಯನ್ನು ಅಲ್ಲಿನ ಜಿಲ್ಲಾಡಳಿತ ತೆರವು ಗೊಳಿಸಿ ಇಡೀ ಹಿಂದುಳಿದ ವರ್ಗದ ಸಮಾಜದವರನ್ನು ಅಪಮಾನ ಮಾಡಿದ್ದಾರೆ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿ ಮತ್ತೆ ಸಿದ್ದರಾಮಯ್ಯನವರ ಕಂಚಿನ ಪ್ರತಿಮೆಯನ್ನು ಅದೇ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡ್ತಿದ್ದಲ್ಲಿ ನಾವು ರಾಜ್ಯದಂತ ಉಗ್ರವಾದ ಹೋರಾಟವನ್ನ ಹಮ್ಮಿಕೊಳ್ಳಬೇಕಾಗುತ್ತದೆ ನಾವು ಇವತ್ತು ತಾತ್ಕಾಲಿಕವಾಗಿ ಸಾಂಕೇತಿಕ ಪ್ರತಿಭಟನೆಯನ್ನು ಮಾಡಿದ್ದೇವೆ ಹಾಗೂ ಒಂದು ವೇಳೆ ಪ್ರತಿಮೆಯನ್ನು ಹಾಕದಿದ್ದಲ್ಲಿ ನಾವು ನಂಜನಗೂಡಿನಿಂದ



ಕಲಬುರ್ಗಿ ವರೆಗೂ ಪಾದಯಾತ್ರೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮುಖಂಡರುಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು

ಈ ಪ್ರತಿಭಟನೆಯಲ್ಲಿ ಡಾಕ್ಟರ್ ಎಸ್ ಯತಿಂದ್ರ ಸಿದ್ದರಾಮಯ್ಯ ರವರ ಫೌಂಡೇಶನ್ ಅಧ್ಯಕ್ಷ ಕೆ ಎಸ್ ಹುಂಡಿ ಕೆ ಆರ್ , ರವಿಕುಮಾರ್ ಮುಖಂಡರುಗಳಾದ ಕಳಲೆ ಕನಕರಾಜ್ , ಚಾಮಲಾಪುರದ ಹುಂಡಿ, ರಾಮು ತಾಲೂಕು ಲಾರಿ ಮಾಲೀಕರ ಸಂಘದ ಅಧ್ಯಕ್ಷ ವಿಶ್ವನಾಥ್ ಕೀರ್ತಿರಾಜ್ ವಿಶ್ವಾ , ನಗರಸಭಾ ಸದಸ್ಯ ಗಂಗಾಧರ್ ಕುರಿಹುಂಡಿ ರಾಜು ತಾಂಡವಪುರ ಎಂ , ದಕ್ಷಿಣ ಮೂರ್ತಿ ಮಾಜಿ ಗ್ರಾಫ ಸದಸ್ಯ ಶಿವರಾಜು ಟಿಕೆ ರವಿ ಬಿಳಿಗೆರೆ ಗೋಲ್ಡ್ ಸುರೇಶ್, ಮಹೇಶ್, ತಾಲೂಕು ಹಾಲುಮತ ಮಹಾಸಭಾಧ್ಯಕ್ಷ ಕುಮಾರ್ ಗೌಡ , ತಗಡೂರು ಗಾರ್ಡನ್ ಮಹೇಶ್ ಶಿವಕುಮಾರ್ ಅಲಂಬೂರು ಮುಂಟಿ, ಮಹದೇವಸ್ವಾಮಿ, ಗುರುರಾಜು ಕಿರುಗುಂದ ಶಿವ ನಾಗ ಮಲ್ಲುಪುರ ಪ್ರಕಾಶ್ ಲೋಕೇಶ್, ಪ್ರಕಾಶ್, ಸುನಿಲ್, ಮಂಜು, ಜೈಕುಮಾರ್, ಬಸವರಾಜ್, ಗುರು, ರವಿ, ಶಂಕರ್ ಸೇ–ರಿದಂತೆ 50ಕ್ಕೂ ಹೆಚ್ಚು ಅಭಿಮಾನಿಗಳು ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು ಮುನ್ನೆಚ್ಚ–ರಿಕೆ ಕ್ರಮವಾಗಿ ನಂಜನಗೂಡು ಪೊಲೀಸರು ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದರು

ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಉದ್ಘಾಟನ ಭಾಗ್ಯ ಭರದ ಸಿದ್ಧತೆ .

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ಕರಡಕಲ್ ಗ್ರಾಮದ ವರವಲಯದ ನಾರಾಯಣಪುರ ಮುಖ್ಯ ರಸ್ತೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಉದ್ಘಾಟನ ಭಾಗ್ಯ ಬಂದಿದ್ದು ಭರದ ಸಿದ್ಧತೆಗಳು ನಡೆಯುತ್ತಿವೆ.

ಇದೆ ತಿಂಗಳ ಒಳಗೆ ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಉದ್ಘಾಟನೆಗೊಳ್ಳಲಿದೆ ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಇಂದು ಆಸ್ಪತ್ರೆ ಆವರಣದಲ್ಲಿ ಬೃಹತ್ ಸ್ವಚ್ಛತಾ ಕಾರ್ಯ ಬರದಿಂದ ಸಾಗಿದೆ . ಆಸ್ಪತ್ರೆಯ ವಾರ್ಡ್‌ಗಳು, ಆವರಣ , ವೈದ್ಯಕೀಯ ಉಪಕರಣಗಳು, ಹಾಸಿಗೆ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ



ಸೇರಿದಂತೆ ಸಂಪೂರ್ಣ ಪ್ರದೇಶವನ್ನು ಸ್ವಚ್ಛಗೊಳಿಸಲಾಯಿತು. ಜೊತೆಗೆ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿ ಬೇಕಿರುವ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆರಂಭದಿಂದ ತಾಲೂಕಿನ ಬಾಣಂತಿಯರು ಮತ್ತು ಮಕ್ಕಳಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ದೊರೆಯಲಿದ್ದು, ಸಾರ್ವಜನಿಕ ವಲಯದಲ್ಲಿ ಸಂತಸ ವ್ಯಕ್ತವಾಗಿದೆ. ಕಟ್ಟಡ ನಿರ್ಮಾಣವಾಗಿ ಬಹುದಿನಗಳಾದರೂ ಉದ್ಘಾಟನೆ ವಿಳಂಬವಾಗುತ್ತಿದ್ದ ರಿಂದ ವಿವಿಧ ಸಂಘ–ಸಂಸ್ಥೆಗಳು ಆಸ್ಪತ್ರೆಯನ್ನು ಶೀಘ್ರ ಆರಂಭಿಸಬೇಕೆಂದು ಒತ್ತಾಯಿಸುತ್ತಿದ್ದರು. ಈ ಉದ್ಘಾಟನಾ ಸಮಾರಂಭಕ್ಕೆ ಆರೋಗ್ಯ ಸಚಿವರು , ಉಸ್ತುವಾರಿ ಸಚಿವರು , ಹಿರಿಯ ಅಧಿಕಾ–ರಿಗಳು ಹಾಗೂ ಜನಪ್ರತಿನಿಧಿಗಳು ಆಗಮಿಸುವ ನಿರೀಕ್ಷೆ ಇದ್ದು, ಶೀಘ್ರದಲ್ಲೇ ಅಧಿಕೃತ ಕಾರ್ಯಕ್ರಮದ ನಿಖರ ದಿನಾಂಕ ಪ್ರಕಟವಾಗಲಿದೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ. ಈ ಸಂದರ್ಭದಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ. ರುದ್ರಗೌಡ ಪಾಟೀಲ್ ಮತ್ತು ಮಕ್ಕಳ ತಜ್ಞಡಾ. ಸಂಜೀವ್ ರೆಡ್ಡಿ ಹಾಗೂ ಸಿಬ್ಬಂದಿ ವರ್ಗದವರು ಇದ್ದರು .

ಕುಷ್ಟಗಿ ತಾಲೂಕು ತೀವ್ರ ಬರಪೀಡಿತ ಎಂದು ಅಧಿಕೃತ ಗೆಜೆಟ್ ಪ್ರಕಟ ರೈತರ ನಿರಂತರ ಹೋರಾಟಕ್ಕೆ ಜಯ ಧರಣಿ ಸ್ಥಳದಲ್ಲಿ ಸಿಹಿ ಹಂಚಿ ಸಂಭ್ರಮ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ರೈತರು, ಮಠಾಧೀಶರು, ಯುವಕರು ಹಾಗೂ ವಿವಿಧ ಸಂಘಟನೆಗಳು ನಡೆಸಿದ ನಿರಂತರ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದ್ದು, ಕುಷ್ಟಗಿ ತಾಲೂಕನ್ನು ತೀವ್ರ ಬರಪೀಡಿತ (Severe Drought) ತಾಲೂಕು ಎಂದು ಗುರುತಿಸಿ ರಾಜ್ಯ ಸರ್ಕಾರ ಅಧಿಕೃತ ಗೆಜೆಟ್ ಅಧಿಸೂಚನೆ ಹೊರಡಿಸಿದೆ.

ಕುಷ್ಟಗಿ ತಾಲೂಕನ್ನು ಬರಪೀಡಿತ ಎಂದು ಘೋಷಿಸುವಂತೆ ಹಲವು ದಿನಗಳಿಂದ ನಡೆದ ಹೋರಾಟದ ಹಿನ್ನೆಲೆಯಲ್ಲಿ ಸರ್ಕಾರದ ನಿರ್ಧಾರ ಪ್ರಕಟವಾಗುತ್ತಿದ್ದಂತೆ ರೈತರು ಹರ್ಷ ವ್ಯಕ್ತಪಡಿಸಿದರು. ಪಟ್ಟಣದ ತಹಶೀಲ್ದಾರ್ ಕಚೇ–ರಿಯ ಹನಮಸಾಗರ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿ ಮುಂಭಾಗದ ಧರಣಿ ಸ್ಥಳದಲ್ಲಿ ರೈತ ಸಂಘ, ತಾವರಗೇರಾ ಹೋರಾಟ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿಕೊಂಡು ಸಂಭ್ರಮಿಸಿದರು.

ನಿಡಶೇಸಿ ಶ್ರೀ ಷ.ಬ್ರ. 108 ಅಭಿನವ ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, "ನಮ್ಮ ತಾಲೂಕನ್ನು ಜಪಾನ್



ಮಾಡಿರಿ ಎಂದು ನಾವು ಕೇಳಿಲ್ಲ, ನಮ್ಮ ರೈತರನ್ನು ಜೋಪಾನ ಮಾಡಿ ಎಂದು ಕೇಳಿದ್ದೆವು. ನಮಗೆ ಅನ್ನ ನೀಡುವವರು ಶಿವಯೋಗಿ ಮತ್ತು ನೇಗಿಲಯೋಗಿ. ವರುಣ ದೇವರ ರೂಪದ ಶಿವಯೋಗಿ ಕೈಕೊಟ್ಟಾಗ ಸರ್ಕಾರ ಕೈಹಿಡಿದಿದೆ. ಇದು ಧರ್ಮದ ಜಯ" ಎಂದರು. ಮದ್ದಾನಿ ಹಿರೇಮಠದ ಶ್ರೀ ಷ.ಬ್ರ. 108 ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, "ರೈತರು ದೇಶದ ಬೆನ್ನೆಲುಬು. ಬರದಿಂದ ನೊಂದಿರುವ ರೈತರಿಗೆ ಸರ್ಕಾರ ಆಸರೆಯಾಗಬೇಕು. ಸರ್ಕಾರದ ನಿರ್ಧಾರದಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ" ಎಂದರು.

ಹೋರಾಟಗಾರ ಬಸವರಾಜ ಗಾಣಿಗಾರ ಮಾತನಾಡಿ, ರೈತ ಸಂಘಟನೆಗಳು, ಕುಷ್ಟಗಿ ತಾಲೂಕಿನ ಸಾವಿರಾರು ಮಹಿಳೆಯರು ಹಾಗೂ ತಾವರಗೇರಾ ಪಡೆ ಹೋರಾಟಕ್ಕೆ ಬೆಂಬಲ ನೀಡಿವೆ. "ಇಂದು ಸಿಹಿ ಹಂಚಿ ಸಂಭ್ರಮಿಸಿದ್ದೇವೆ. ರೈತರಿಗೆ ಪರಿಹಾರ ದೊರೆಯುವವರೆಗೂ ಹೋರಾಟ ನಿಲ್ಲುವುದಿಲ್ಲ" ಎಂದು ಹೇಳಿದರು. ಡಾ. ದೇವೇಂದ್ರಪ್ಪ ಬಳೂಟಗಿ ಮಾತನಾಡಿ, "ಯುವಕರ ಪಾದಯಾತ್ರೆಗೆ ಸಿಕ್ಕ ಜಯ ಇದಾಗಿದೆ. ಕೊಪ್ಪಳ ತಲುಪುವ ಮೊದಲೇ ಸರ್ಕಾರ ಎಚ್ಚೆತ್ತುಕೊಂಡಿದೆ. ಅಧಿಕಾರಿಗಳು ಪ್ರಾಮಾಣಿಕವಾಗಿ ಸಮೀಕ್ಷೆ ನಡೆಸಿ, 18,500 ರೈತ ಕುಟುಂಬಗಳಿಗೆ ಪರಿಹಾರ, ಬೀಜ ಹಾಗೂ ಸಾಲ ಮನ್ನಾ ಸೇರಿದಂತೆ ಅಗತ್ಯ ನೆರವು ಒದಗಿಸಬೇಕು" ಎಂದು ಆಗ್ರಹಿಸಿದರು.

ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರ ಮಾತನಾಡಿ, ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕುಷ್ಟಗಿ ಮಳೆ ಆಶ್ರಿತ ತಾಲೂಕಾಗಿದ್ದು, ನೀರಾವರಿ ಸೌಲಭ್ಯವಿಲ್ಲದೆ ಬೆಳೆಗಳು ನಾಶವಾಗಿರುವ ಕುರಿತು ಮನವಿ ಮಾಡಲಾಗಿತ್ತು. "ಸರ್ಕಾರ ಸ್ಪಂದಿಸಿರುವುದು ಸ್ವಾಗತಾರ್ಹ. ವಿವಿಧ ರೈತ ಸಂಘಟನೆಗಳ ಹೋರಾಟದ ಫಲವಾಗಿ ಕುಷ್ಟಗಿಯನ್ನು ತೀವ್ರ ಬರಪೀಡಿತ ತಾಲೂಕು ಎಂದು ಘೋಷಿಸಲಾಗಿದೆ. ಸರ್ಕಾರಕ್ಕೆ ಧನ್ಯವಾದಗಳು. ಶೀಘ್ರವೇ ರೈತರಿಗೆ ಪರಿಹಾರ ಕಾರ್ಯ ಕೈಗೊಳ್ಳಬೇಕು" ಎಂದರು.

ಶಾಸಕ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಮಾತನಾಡಿ, "ಕುಷ್ಟಗಿ ರೈತರ ನಿರಂತರ ಹೋರಾಟಕ್ಕೆ ಫಲ ಸಿಕ್ಕಿದೆ. ಹನಮಸಾಗರ ಬಂದ್, ತಾವರಗೇರಾದಿಂದ ಕೊಪ್ಪಳ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆದ ಪಾದಯಾತ್ರೆ ಹಾಗೂ ನಿಡಶೇಸಿ ಶ್ರೀ ಅಭಿನವ ಕ–ರಿಬಸವ ಶಿವಾಚಾರ್ಯ ಶ್ರೀಗಳ ಪರಿಶ್ರಮಕ್ಕೆ ಜಯ ಸಿಕ್ಕಿದೆ. ಬಿಜೆಪಿ ಕಾರ್ಯಕರ್ತರ ಹೋರಾಟದ ಶ್ರಮದ ಜೊತೆಗೆ ವಿಧಾನಸಭೆಯಲ್ಲಿಯೂ ಈ ಕುರಿತು ಧ್ವನಿ ಎತ್ತಿದ್ದೆ. ಸರ್ಕಾರ ಮಣಿದು ಅಧಿಸೂಚನೆ ಹೊರಡಿಸಿದೆ" ಎಂದರು. "ಬರ ಘೋಷಣೆ ಕೇವಲ ಅಧಿಸೂಚನೆಗೆ ಸೀಮಿತವಾಗಬಾರದು. ಪ್ರತಿ ರೈತನ ಖಾತೆಗೆ ಪರಿಹಾರ ಜಮೆಯಾಗುವವರೆಗೂ ಹೋರಾಟ ಮುಂದುವರಿಯಲಿದೆ" ಎಂದು ಅವರು ಹೇಳಿದರು. ಬರಪೀಡಿತ ತಾಲೂಕು ಎಂಬ ಅಧಿಕೃತ ಘೋಷಣೆಯೊಂದಿಗೆ ಹೋರಾಟಕ್ಕೆ ಒಂದು ಹಂತದ ಜಯ ದೊರೆತಿದ್ದು, ಇದೀಗ ರೈತರಿಗೆ ದೊರೆಯಬೇಕಾದ ಪರಿಹಾರ, ಬೀಜ, ಸಾಲ ಹಾಗೂ ಇತರೆ ಸರ್ಕಾರಿ ಸೌಲಭ್ಯಗಳತ್ತ ರೈತರ ಗಮನ ಹರಿದಿದೆ.

ನೇಮಕಾತಿ ಪ್ರಕಟಣೆ

IIT ಧಾರವಾಡ ನೇಮಕಾತಿ 2026 – 1 ಲೆಕ್ಕಪರಿಶೋಧನಾ ಸಲಹೆಗಾರ (Audit Consultant) ಹುದ್ದೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 23, 2026

IIT ಧಾರವಾಡ ನೇಮಕಾತಿ 2026: 1 ಲೆಕ್ಕಪರಿಶೋಧನಾ ಸಲಹೆಗಾರ ಹುದ್ದೆಗೆ ಅರ್ಜಿ ಸಲ್ಲಿಸಿ. ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಲೆಕ್ಕಪರಿಶೋಧನಾ ಸಲಹೆಗಾರ ಹುದ್ದೆಯನ್ನು ಭರ್ತಿ ಮಾಡಲು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IIT) ಧಾರವಾಡವು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಧಾರವಾಡದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 07-ಅಕ್ಟೋಬರ್-2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: iitdh.ac.in

ಕೈ ಶಾಸಕನ ರಾಜೀನಾಮೆ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಬರ ಪೀಡಿತ ತಾಲ್ಲೂಕುಗಳ ಪಟ್ಟಿಯಿಂದ ಇಂಡಿ ಮತ್ತು ಚಡಚಣ ತಾಲ್ಲೂಕು ಕೈ ಬಿಟ್ಟಿರುವುದಕ್ಕೆ ಬೇಸರಗೊಂಡು ಕಾಂಗ್ರೆಸ್‌ನ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ವಿಧಾನಸಭೆಯ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ಅವರು ಇಂದು ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ್ ರವರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಇಂಡಿ ಹಾಗೂ ಚಡಚಣ ತಾಲ್ಲೂಕು ಬರ ಘೋಷಣೆಯಾಗಿಲ್ಲ. ನಮ್ಮ ಮಾತಿಗೆ, ನಮ್ಮ ಭಾವನೆಗಳಿಗೆ ಬೆಲೆ ಇಲ್ಲದಂತಾಗಿದೆ. ಹಾಗಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ.

ಈಗಿನ ರಾಜಕೀಯ ವಾತಾವರಣದಲ್ಲಿ ಬಲಾಢ್ಯರಿಗೆ, ಒತ್ತಡ ತಂತ್ರಗಳನ್ನು ಹೆಣೆಯುವವರಿಗೆ ಮನ್ನಣೆ ಇದೆ. ನಮ್ಮಂತಹ ಸೌಮ್ಯ ಸ್ವಭಾವದವರಿಗೆ ಯಾವುದೇ ಕೆಲಸಗಳಿಗೆ ಮನ್ನಣೆ ದೊರೆಯುತ್ತಿಲ್ಲ. ಆದ ಕಾರಣ ನನ್ನ ಕ್ಷೇತ್ರದ ಆಶಯ, ಆಶೋತ್ತರಗಳಿಗೆ ಸ್ಪಂದಿಸಲು ಸಾಧ್ಯವಾಗದ ಕಾರಣ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.



ಶಾಸಕರಾದ ಯಶವಂತರಾಯಗೌಡ ಪಾಟೀಲ್ ಅವರು ವಿಧಾನಸಭಾಧ್ಯಕ್ಷರಿಗೆ ರಾಜೀನಾಮೆ ಸಲ್ಲಿಸಿದ್ದು, ಅದು ಇನ್ನು ಅಂಗೀಕಾರವಾಗಿಲ್ಲ.

ರಾಜೀನಾಮೆ ಪತ್ರ : ವಿಧಾನಸಭೆಯಲ್ಲಿ ಗದ್ದಲ, ಕೋಲಾಹಲ ಶಾಸಕ ಸ್ಥಾನಕ್ಕೆ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ನೀಡಿರುವ ವಿಚಾರದಲ್ಲಿ ವಿಧಾನಸಭೆಯಲ್ಲಿಂದು ಪ್ರಸ್ತಾಪವಾಗಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ವಾಕ್ಸಮರವೇ ನಡೆದು ಸದನದಲ್ಲಿ ಗದ್ದಲ, ಕೋಲಾಹಲದ ವಾತಾವರಣ ರೂಪುಗೊಂಡಿತು. ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರು, ವಿಧಾನಸಭೆಯಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ್ ರವರ ರಾಜೀನಾಮೆ ವಿಷಯವನ್ನು ಪ್ರಸ್ತಾಪಿಸಿ, ಅವರು ರಾಜೀನಾಮೆ ನೀಡಿರುವ ಪತ್ರದ ಪ್ರತಿಯನ್ನು ಪ್ರದರ್ಶಿಸಿ, ಕಾಂಗ್ರೆಸ್ ಪಕ್ಷದ ಶಾಸಕರೇ ರಾಜೀನಾಮೆ ಕೊಟ್ಟಿದ್ದಾರೆ. ಈ ಸರ್ಕಾರಕ್ಕೆ ನಾಚಿಕೆ ಆಗಬೇಕು. ಬರ ನಿರ್ವಹಣೆಯಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಹೇಳಿದಾಗ, ವಿಪಕ್ಷ ಸದಸ್ಯರುಗಳೆಲ್ಲಾ ಶೇಮ್.. ಶೇಮ್.. ಎಂದು ಕೂಗಿದರು.

ಈ ಹಂತದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ದೊಡ್ಡಮಟ್ಟದ ಮಾತಿನ ಚಕಮಕಿ ನಡೆಯಿತು. ಸಚಿವರಾದ ಯು.ಟಿ. ಖಾದರ್, ನರೇಂದ್ರ ಸ್ವಾಮಿ ಇವರುಗಳು ಎದ್ದುನಿಂತು ಇದು ನಮ್ಮ ಪಕ್ಷದ ವಿಚಾರ. ಅವರು ರಾಜೀನಾಮೆ ಕೊಟ್ಟಿದ್ದರೆ ನಮ್ಮ ಪಕ್ಷ ನೋಡಿಕೊಳ್ಳುತ್ತದೆ, ನಿಮಗೇಕೆ ಎಂದು ಹೇಳಿದರಾದರೂ ವಿಪಕ್ಷ ಸದಸ್ಯರು ಸರ್ಕಾರದ ವಿರುದ್ಧ ರಾಜೀನಾಮೆ ವಿಚಾರವನ್ನು ಮುಂದಿಟ್ಟುಕೊಂಡು ವಾಗ್ದಾಳಿ ನಡೆಸಿದರು.

ಗದ್ದಲದ ನಡುವೆಯೇ ಮಾತನಾಡಿದ ಬಿಜೆಪಿಯ ಸುನೀಲ್‌ಕುಮಾರ್ ರವರು ಸದನ ನಡೆಯುತ್ತಿದೆ. ರಾಜೀನಾಮೆ ಬಗ್ಗೆ ಸಭಾಧ್ಯಕ್ಷರು ಸದನಕ್ಕೆ ಮಾಹಿತಿ ಕೊಡಬೇಕು ಎಂದು ಮನವಿ ಮಾಡಿದರು. ಸದನ ನಡೆಯುವಾಗ ರಾಜೀನಾಮೆ ಕೊಟ್ಟಿರುವುದು ಸರ್ಕಾರಕ್ಕೆ ದೊಡ್ಡ ಅಪಮಾನ. ಇದಕ್ಕಿಂತ ದೊಡ್ಡ ಅಪಮಾನ ಇನ್ನೊಂದಿಲ್ಲ ಎಂದರು. ಪ್ರತಿಪಕ್ಷಗಳ ಮಾತಿಗೆ ತಿರುಗೇಟು ನೀಡಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಇದಕ್ಕೆಲ್ಲಾ ನಿಮ್ಮ ಕೇಂದ್ರ ಸರ್ಕಾರವೇ ಕಾರಣ ಎಂದು ಹೇಳಿದ್ದು ಮತ್ತೆ ಸದನದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು.

ನಂತರ ಮಾತು ಮುಂದುವರೆಸಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಕೇಂದ್ರ ಸರ್ಕಾರದ ಕೆಲವು ಮಾನದಂಡಗಳಿಂದ ಕೆಲವು ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಆಗುತ್ತಿಲ್ಲ. ನಾವು ಪತ್ರ ಬರೆದಿದ್ದರೂ ಕೇಂದ್ರ ಸರ್ಕಾರ ನಿಯಮಾವಳಿಗಳಲ್ಲಿ ರಿಯಾಯ್ತಿ ನೀಡುತ್ತಿಲ್ಲ ಎಂದು ಹೇಳಿದರು. ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಈ ನಿಯಮಾವಳಿಗಳನ್ನು ಮಾಡಿದ್ದೇ ನಿಮ್ಮ ಯುಪಿಎ ಸರ್ಕಾರ ಎಂದರು.

ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಪಕ್ಷ ನಾಯಕ ಆರ್. ಅಶೋಕ್ ಎದ್ದುನಿಂತು ಶಾಸಕರು ರಾಜೀನಾಮೆ ನೀಡಿದ್ದಾರೋ, ಇಲ್ಲವೋ ಅದನ್ನು ಹೇಳಿ ಎಂದು ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು. ಒಂದು ಕಡೆ ಸರ್ಕಾರ ಪಾಪರ್ ಎಂದು ಹಣಕಾಸು ಇಲಾಖೆ ಹೇಳುತ್ತಿದೆ. ಇನ್ನೊಂದು ಕಡೆ ಬರ ನಿರ್ವಹಣೆ ಮಾಡುತ್ತಿಲ್ಲ ಎಂದು ಆರ್. ಅಶೋಕ್ ದೂರಿದರು. ಈ ಹಂತದಲ್ಲಿ ಮತ್ತೆ ಸದನದಲ್ಲಿ ಪ್ರತಿಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ಮಾತಿನ ವಾಕ್ಸಮರ ನಡೆದು ಗದ್ದಲದ ಪರಿಸ್ಥಿತಿ ರೂಪುಗೊಂಡಿತು.

ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು, ಉಪಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಈ ರೀತಿ ಮಧ್ಯೆ ಮಧ್ಯೆ ಮಾತನಾಡುವುದು ಸರಿಯಲ್ಲ ಎಂದು ಹೇಳಿದರಾದರೂ ಸದಸ್ಯರುಗಳ ನಡುವೆ ಮಾತಿನ ಚಕಮಕಿ ಮುಂದುವರೆದೇ ಇತ್ತು.

ಕೆರೆಗಳ ಅಭಿವೃದ್ಧಿ : ಸಿಇಒಗಳಿಗೆ ಖಂಡ್ರೆ ಸೂಚನೆ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದ 7 ಜಿಲ್ಲೆಗಳ 500 ಕೆರೆಗಳ ಪುನಶ್ಚೇತನಕ್ಕೆ ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿ 150 ಕೋಟಿ ರೂ. ಸಮಗ್ರ ಯೋಜನಾ ವರದಿ ಸಿದ್ಧವಾಗಿದ್ದು, ಸಮರೋಪಾದಿಯಲ್ಲಿ ಕೆರೆ ಅಭಿವೃದ್ಧಿ ಮಾಡುವಂತೆ ಸಂಬಂಧಿತ ಸಿಇಒಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.



ವಿಕಾಸಸೌಧದ ತಮ್ಮ ಕಚೇರಿಯಲ್ಲಿಂದು ಎಲ್ಲ ಜಿಲ್ಲೆಗಳ ಪಂಚಾಯತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಅವರು, ವಿಶ್ವಬ್ಯಾಂಕ್ ನೆರವಿನ ಜೊತೆಗೆ ವಿವಿಬಿ ರಾಮ್ ಜಿ ಸಹಯೋಗದಲ್ಲಿ ಈ ಕೆರೆಗಳ ಹೂಳು ತೆಗೆಯುವುದು, ಏರಿ ದುರಸ್ತಿ, ಏರಿ ಎತ್ತರಿಸುವುದು, ಸೌಂದರ್ಯೀಕರಣ, ನಾಲೆಗಳ ದುರಸ್ತಿ ಮಾಡುವಂತೆ ನಿರ್ದೇಶನ ನೀಡಿದರು. ಈಗ ಮಳೆ ಇಲ್ಲದ ಕಾರಣ ಕೆರೆಗಳು ಬತ್ತಿ ಹೋಗಿದ್ದು, ಕೆರೆ, ಕಾಲುವೆ ಪುನಶ್ಚೇತನಕ್ಕೆ ಸೂಕ್ತ ಸಮಯವಾಗಿದೆ. ಹಿಂಗಾರು ಮಳೆಯಾದರೆ ಈ ಕೆರೆಗಳಿಗೆ ನೀರು ಬರುತ್ತದೆ. ಮುಂದಿನ ಬೇಸಿಗೆಯಲ್ಲಿ ಎದುರಾಗಬಹುದಾದ ನೀರಿನ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಭೂಮಿಯ ತೇವಾಂಶ ಮತ್ತು ಅಂತರ್ಜಲ ಮಟ್ಟವೂ ಹೆಚ್ಚುತ್ತದೆ. ಹೀಗಾಗಿ ತತ್ ಕ್ಷಣವೇ ಕಾರ್ಯ ಪ್ರವೃತ್ತರಾಗಬೇಕು ಎಂದು ತಿಳಿಸಿದರು. ವಿಶ್ವಬ್ಯಾಂಕ್ ಯೋಜನೆಯಡಿ ಬೆಂಗಳೂರು ಗ್ರಾಮಾಂತರ -68, ಬೆಂಗಳೂರು ನಗರ -67, ಬೀದರ್-44, ಚಿಕ್ಕಬಳ್ಳಾಪುರ -90, ಕಲ್ಬುರ್ಗಿ-49, ತುಮಕೂರು -96 ಮತ್ತು ಕೋಲಾರ ಜಿಲ್ಲೆಯ-86 ಕೆರೆಗಳ ಪುನಶ್ಚೇತನಕ್ಕೆ ಯೋಜನೆ ರೂಪಿಸಲಾಗಿದೆ ಎಂದೂ ಈಶ್ವರ ಖಂಡ್ರೆ ತಿಳಿಸಿದರು. ಕಲುಷಿತ ನೀರು ಪೂರೈಸಿದರೆ ಕ್ರಮ : ಎಲ್ಲ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಪೂರೈಕೆ ಆಗುತ್ತಿರುವುದನ್ನು ಸಿಇಓಗಳು ಮತ್ತು ಪಿಡಿಓಗಳು ಖಚಿತಪಡಿಸಿಕೊಳ್ಳಬೇಕು. ನಿಯಮಿತವಾಗಿ ನೀರಿನ ಪರೀಕ್ಷೆ ಮಾಡಬೇಕು. ಕಲುಷಿತ ನೀರಿನ ದೂರು ಬಂದರೆ ಕೂಡಲೇ ಜಲ ಮೂಲದಿಂದ ಹಿಡಿದು ಮನೆಯ ನಲ್ಲಿಯವರೆಗೆ ಪ್ರತಿಯೊಂದು ಹಂತದಲ್ಲೂ ಪರಿಶೀಲನೆ ನಡೆಸಿ, ತ್ಯಾಜ್ಯ ನೀರು ಸೇರದಂತೆ ಕ್ರಮವಹಿಸಬೇಕು ಎಂದು ಸೂಚಿಸಿದರು.

ವಿಬಿಜಿ ರಾಮ್ ಜಿ ಕಾಮಗಾರಿಗೆ ವೇಗ ನೀಡಿ : ಬೆಂಗಳೂರು, ಬೆಳವಾವಿ, ಉತ್ತರ ಕನ್ನಡ, ಧಾರವಾಡ, ಕೊಡಗು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ವಿಬಿಜಿ ರಾಮ್ ಜಿ ಅಡಿ ಮಾನವ ದಿನ ಸೃಜನೆ ಕಡಿಮೆ ಪ್ರಮಾಣದಲ್ಲಿದೆ. ಪ್ರಸ್ತುತ ರಾಜ್ಯ ವಸತಿ ಯೋಜನೆಗಳನ್ನೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವ್ಯಾಪ್ತಿಗೆ ಸೇರಿಸಿರುವ ಹಿನ್ನೆಲೆಯಲ್ಲಿ ಎಲ್ಲ ನಗರ ಪಟ್ಟಣದಲ್ಲೂ ಉದ್ಯೋಗ ನೀಡಲು ಅವಕಾಶವಿದೆ. ಇದನ್ನು ಬಳಸಿಕೊಂಡು ರಾಜ್ಯದ ಯಾವುದೇ ಭಾಗದಿಂದ ಯಾರೊಬ್ಬರೂ ಗುಳೆ ಹೋಗದಂತೆ ತಡೆಯಬೇಕು ಎಂದು ಈಶ್ವರ ಖಂಡ್ರೆ ಹೇಳಿದರು.

ತಮಿಳುನಾಡು ವಿದ್ಯಾರ್ಥಿಗಳಿಗೆ ಚಿಕನ್, ಮಟನ್ ಜೊತೆ ಗೋಮಾಂಸ ಬೇಕಂತೆ

ನೈಜ್ಯ ದೆಸೆ ನ್ಯೂಸ್

ಚೆನ್ನೈ: ಸರ್ಕಾರಿ ವಸತಿ ನಿಲಯಗಳ ಆಹಾರ ಮೆನುವಿನಲ್ಲಿ ಚಿಕನ್, ಮಟನ್ ಜೊತೆಗೆ ಗೋಮಾಂಸವನ್ನೂ ಸೇರಿಸುವಂತೆ ತಮಿಳುನಾಡಿನ ಕೆಲ ವಿದ್ಯಾರ್ಥಿಗಳು ಬೇಡಿಕೆ ಇಟ್ಟಿದ್ದಾರೆ. ಈ ಕುರಿತು ಸರ್ಕಾರ ಇನ್ನೂ ಯಾವುದೇ ಅಂತಿಮ ನಿರ್ಧಾರ ಕೈಗೊಂಡಿಲ್ಲ.

ಈ ವಿಷಯದ ಕುರಿತು ತಮಿಳುನಾಡು ಸಾಮಾಜಿಕ ನ್ಯಾಯ ಸಚಿವ ವನ್ನಿ ಅರಸು ಮಾತನಾಡಿ, ಕೆಲ ವಿದ್ಯಾರ್ಥಿಗಳು ತಮ್ಮ ಊಟದ ಮೆನುವಿನಲ್ಲಿ ಗೋಮಾಂಸವನ್ನು ಸೇರಿಸುವಂತೆ ಮನವಿ ಮಾಡಿರುವುದು ನಿಜ ಎಂದು ತಿಳಿಸಿದ್ದಾರೆ.

ಚೆನ್ನೈನ ಸೈದಾಪೇಟೆಯಲ್ಲಿರುವ ಎಂ.ಸಿ. ರಾಜಾ ಸಾಮಾಜಿಕ ನ್ಯಾಯ ವಿದ್ಯಾರ್ಥಿ ವಸತಿ ನಿಲಯಕ್ಕೆ ಅರಸು ಭೇಟಿ ನೀಡಿ, ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತು ಸಂವಾದ ನಡೆಸಿದರು. ಈ ವೇಳೆ ಗ್ರಾಮೀಣ ಹಿನ್ನೆಲೆಯ ಕೆಲ ವಿದ್ಯಾರ್ಥಿಗಳು ಈಗಿರುವ ಮಾಂಸಾಹಾರಿ ಮೆನುವಿನಲ್ಲಿ ಗೋಮಾಂಸವನ್ನು ಸೇರಿಸುವಂತೆ ಸಚಿವರಿಗೆ ಮನವಿ ಮಾಡಿದ್ದಾರೆ.

ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಈಗಾಗಲೇ ಮಟನ್ ಮತ್ತು ಚಿಕನ್ ನೀಡಲಾಗುತ್ತಿದ್ದು, ಸೋಮವಾರದಂದು



ಬಿರಿಯಾನಿ ನೀಡಲಾಗುತ್ತಿದೆ. ಮಟನ್ ದುಬಾರಿಯಾಗಿರುವುದರಿಂದ ಗ್ರಾಮೀಣ ಹಿನ್ನೆಲೆಯ ಕೆಲ ವಿದ್ಯಾರ್ಥಿಗಳು ಅದನ್ನು ತಮ್ಮ ಮನೆಗಳಲ್ಲಿ ಹೆಚ್ಚಾಗಿ ಸೇವಿಸುವುದಿಲ್ಲ. ಹೀಗಾಗಿ ಮೆನುವಿನಲ್ಲಿ ಗೋಮಾಂಸ ಸೇರಿಸುವಂತೆ ಮನವಿ ಮಾಡಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ. ವಿದ್ಯಾರ್ಥಿಗಳ ಬೇಡಿಕೆಗೆ ಪ್ರತಿಕ್ರಿಯಿಸಿದ ವನ್ನಿ ಅರಸು, ಈ ಕುರಿತು ಸರ್ಕಾರ ತಕ್ಷಣ ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿ, ಎಲ್ಲರ ಅಭಿಪ್ರಾಯಗಳನ್ನು ಪರಿಗಣಿಸಿದ ಬಳಿಕ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಈ ಮಧ್ಯೆ, ಗೋಮಾಂಸವನ್ನು ಹಾಸ್ಟೆಲ್ ಮೆನುವಿನಲ್ಲಿ ಸೇರಿಸುವ ಸಾಧ್ಯತೆಯನ್ನು ಪುತ್ತಿಯ ತಮಿಳಗಂ ಪಕ್ಷದ ನಾಯಕ ಕೆ. ಕೃಷ್ಣಸಾಮಿ ವಿರೋಧಿಸಿದ್ದು, ಸಚಿವರು ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

ನಕಲಿ ದೂರ ಸೃಷ್ಟಿಸಿ ಪತ್ರಕರ್ತನ ವಿರುದ್ಧ ಜಾತಿನಿಂದನೆ ಪ್ರಕರಣ ದಾಖಲು ಆರೋಪ: ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿ ಅವರಾತ್ರಿ ಧರಣಿ

ನೈಜ್ಯ ದೆಸೆ ನ್ಯೂಸ್

ಯಾದಗಿರಿ: ಕಿಲ್ಲನಕೆರೆ ಗ್ರಾಮದ ಅಮಾಯಕ ಅನರಕ್ಷ ಮಹಿಳೆ ಈರಮ್ಮ ಗಂಡ ಬಸವರಾಜು ಕೋರಂ ಅವರನ್ನು ದುರುಪಯೋಗಪಡಿಸಿಕೊಂಡು ಪತ್ರಕರ್ತನ ವಿರುದ್ಧ ಸುಳ್ಳು ಜಾತಿನಿಂದ ಪ್ರಕರಣ ದಾಖಲಿಸಲಾಗಿದೆ ಎಂದು ಆರೋಪಿಸಿ ವಿಶೇಷ ತನಿಖೆಗೆ ಆಗ್ರಹಿಸಿ ನಗರದಲ್ಲಿ ವಿವಿಧ ಸಂಘಟನೆಗಳು ನೇತೃತ್ವದಲ್ಲಿ ಅವರಾತ್ರಿ ಧರಣಿ ಆರಂಭಿಸಲಾಗಿದೆ.

ದಿನಾಂಕ. 20. 8. 2026ರಂದು ದಾಖಲಾದ ದೂರಿನಲ್ಲಿ ಮಹಿಳೆಗೆ ನಾನು ಯಾರ ವಿರುದ್ಧ ದೂರು ನೀಡುತ್ತಿದ್ದೇನೆ ಮತ್ತು ದೂರಿನಲ್ಲಿ ಏನಿದೆ ಎಂಬುದರ ಬಗ್ಗೆ ಮಾಹಿತಿಯೇ ಇಲ್ಲ. ಈ ಕುರಿತು ಆಡಿಯೋ ದಾಖಲು ಲಭ್ಯ ಇದೆ. ಪೊಲೀಸರು ಠಾಣೆಯ ಹೊರಗಡೆ ಕುಳಿತುಕೊಳ್ಳಿ ಎಂದು ಹೇಳಿದರು ಎಂದು ಮಹಿಳೆ ಹೇಳಿರುವುದು ದಾಖಲಾಗಿದೆ. ಬೇರೆಯವರು ಸಿದ್ದಪಡಿಸಿದ ದೂರನ ಮೇಲೆ ಹೆಬ್ಬಟ್ಟು ಮಾತ್ರ ಪಡೆಯಲಾಗಿದೆ ಎಂಬುದು ಹೋರಾಟಗಾರರು ವಾದ. ಮನವಿಯಲ್ಲಿ ಪ್ರಮುಖ ಬೇಡಿಕೆಗಳು.



ದೂರುದರ ಮಳೆಯನ್ನು ಯಾವುದೇ ಒತ್ತಡವಿಲ್ಲದೆ ಸ್ವತಂತ್ರವಾಗಿ ವಿಚಾರಣೆ ಮಾಡಿ. ಚಿತ್ರೀಕರಣದೊಂದಿಗೆ ವಿಚಾರಣೆ ಹೇಳಿಕೆ ದಾಖಲು ಮಾಡಬೇಕು. ದೂರು ಬರೆದು ಕೊಟ್ಟವರು ಯಾರು. ಹೇಳಿಕೆ ದಾಖಲಿಸಿದವರು ಯಾರು. ಪೊಲೀಸ್ ಠಾಣೆಗೆ ಹಾಜರುಪಡಿಸಿದವರು ಯಾರು ಎಂಬುದನ್ನು ಪರಿಶೀಲಿಸಬೇಕು. ಪತ್ರಕರ್ತನ ಬಲ್ಲಿರುವ ಆಡಿಯೋವನ್ನು ಅಧಿಕೃತವಾಗಿ ಪಡೆದು ತಾಂತ್ರಿಕ ಪರಿಶೀಲನೆಯನ್ನು ನಡೆಸಬೇಕು. ಸಾಮಾಜಿಕ ಬಹಿಷ್ಕಾರದಂತ ಜನಪರ ವಿಷಯ ವರದಿ ಮಾಡಿದ ಕಾರಣಕ್ಕೆ ಪತ್ರಕರ್ತನ ವಿರುದ್ಧ ಪ್ರತಿಕಾರವಾಗಿ ಪ್ರಕರಣ ದಾಖಲಿಸಲಾಗಿದೆಯೇ ಎಂದು ತನಿಖೆಯಾಗಬೇಕು. ಪ್ರಾಥಮಿಕ ಪರಿಶೀಲನೆ ಇಲ್ಲದೆ ನಿರಪರಾಧಿಗಳ ಹೆಸರು ಸೇರಿಸಿದರೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ಕ್ರಮ ಜರಗಿಸಬೇಕು.

ಜಾತಿ ದೌರ್ಜನ ತಡೆ ಕಾನೂನು ನಿಜವಾದ ಸಂತ್ರಸ್ತರಿಗೆ ಬಳಕೆಯಾಗಬೇಕು. ಇದು ದುರಪಯೋಗ ಆಗಬಾರದು. ಈ ಹೋರಾಟ ಯಾರನ್ನು ರಕ್ಷಿಸಲು ಅಲ್ಲ. ಸತ್ಯವರ ಬರಬೇಕು. ಎಂದು ಇದರ ಉದ್ದೇಶ ಎಂದು ಹೋರಾಟಗಾರರು ಸಷ್ಟಪಡಿಸಿದ್ದಾರೆ. ನ್ಯಾಯ ಸಿಗುವವರೆಗೂ ಹೋರಾಟ ಮುಂದುವರೆಯಲಿದೆ. ಕ್ರಮ ವಿಫಲವಾದರೆ ಉಪವಾಸ ಸತ್ಯಾಗ್ರಹ ನಡೆಸಲಾಗುವುದೆಂದು ಎಚ್ಚರಿಸಿದರು.

ಧರಣಿಯಲ್ಲಿ ಕೂಲಿ ಸಮಾಜದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ್ ಘೋಷಿ. ಸರ್ವ ಸಂಘಟನೆ ಹೋರಾಟ ಸಮಿತಿಯ ಅನಿಲ್ ಕುಮಾರ್ ಕರಾಟೆ. ಮೈಲಾರಪ್ಪ ಜಾಗರಿದಾರ್. ಶಿವರಾಜ್ ದಾಸನಕೆರೆ. ವೀರೇಶ್ ಸಜ್ಜನ್. ಶಿವ ಸೇನೆಯ ಮುಖಂಡ ವಿಜಯ ಪಾಟೀಲ್. ಶಶಾಂಕ್ ನಾಯಕ್. ಕುರುಬ ಸಂಘದ ಮಾಜಿ ಜಿಲ್ಲಾಧ್ಯಕ್ಷ ವಿಶ್ವನಾಥ್ ನಿಲಹಳ್ಳಿ. ಸುರೇಶ್ ಗೌಡ ಅಲ್ಲಿ ಪುರ್. ಹಲವು ಜನರು ಪಾಲ್ಗೊಂಡಿದ್ದರು.

ನೈಜ್ಯ ದೆಸೆ

ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಚುನಾವಣಾ ಆಯೋಗದ ಬೆಳವಣಿಗೆ ಪ್ರಜಾಪ್ರಭುತ್ವವಾದಿಯನ್ನು ಆತಂಕಕ್ಕೆ ಒಡ್ಡಿದೆ, ಸಿದ್ದರಾಮಯ್ಯ ಜ್ಞಾನೇಶ್ ಕುಮಾರ್ ವಿರುದ್ಧ ತನಿಖೆಗೆ ಆಗ್ರಹ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಚುನಾವಣಾ ಆಯೋಗದೊಳಗಿನಿಂದ ಹೊರಬರುತ್ತಿರುವ ಬೆಳವಣಿಗೆಗಳು ದೇಶದ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯನ್ನೂ ಆತಂಕಕ್ಕೀಡು ಮಾಡುವಂತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮೂವರು ಸದಸ್ಯರ ಆಯೋಗದಲ್ಲಿ ಇಬ್ಬರು ಚುನಾವಣಾ ಆಯುಕ್ತರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಆಯೋಗದ ನಡೆಯ ವಿರುದ್ಧ ಲಿಖಿತ ಆಕ್ಷೇಪ ದಾಖಲಿಸಿದ್ದಾರೆ. ಇದು ಬರೀ ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ವಿಚಾರವಲ್ಲ, ಭಾರತದ ಭವಿಷ್ಯ ಮತ್ತು ಪ್ರಜಾಪ್ರಭುತ್ವದ ಅಳಿವು ಉಳಿವಿನ ಪ್ರಶ್ನೆ. ಸಂವಿಧಾನದ ರಕ್ಷಕರಾಗಿರುವ ರಾಷ್ಟ್ರಪತಿಗಳು ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣವೇ ಪದಚ್ಯುತಗೊಳಿಸಿ, ಅವರ ವಿರುದ್ಧ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶ ನೀಡಬೇಕು ಎಂದು ಆಗ್ರಹಿಸಿದ್ದಾರೆ. ನಿಷ್ಪಕ್ಷಪಾತ ಮತ್ತು ಪಾರದರ್ಶಕ ಮತದಾನವೇ ಭಾರತದ ಪ್ರಜಾಪ್ರಭುತ್ವದ ಆತ್ಮ. ಪ್ರಜೆಗಳ ಮತದ ಹಕ್ಕನ್ನು ರಕ್ಷಿಸಬೇಕಾದ ಜವಾಬ್ದಾರಿ ಹೊತ್ತಿರುವ ಸಾಂವಿಧಾನಿಕ ಸಂಸ್ಥೆ ಚುನಾವಣಾ ಆಯೋಗ. ಆದರೆ ಇಂದು ಅದೇ ಚುನಾವಣಾ ಆಯೋಗದೊಳಗಿನಿಂದ ಹೊರಬರುತ್ತಿರುವ ಬೆಳವಣಿಗೆಗಳು ದೇಶದ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯನ್ನೂ ಆತಂಕಕ್ಕೀಡು ಮಾಡುವಂತಿದೆ ಎಂದಿದ್ದಾರೆ.

ಇಂಗ್ಲೀಷ್ ವೃತ್ತಪತ್ರಿಕೆಯೊಂದರ ತನಿಖಾ ವರದಿಯ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಮೂವರು ಸದಸ್ಯರ ಆಯೋಗದಲ್ಲಿ ಇಬ್ಬರು ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಆಯೋಗದ ನಿರ್ಧಾರಗಳು ಮತ್ತು ಕ್ರಮಗಳ ಕುರಿತು ಲಿಖಿತ ಆಕ್ಷೇಪ ದಾಖಲಿಸಿದ್ದಾರೆ. ಇವು ಸಾಮಾನ್ಯ ಭಿನ್ನಾಭಿಪ್ರಾಯಗಳಲ್ಲ. ಹೊಸ ಮತದಾರರ ನೋಂದಣಿ, ಮತದಾರರ ಹೆಸರುಗಳ ಸೇರ್ಪಡೆ ಮತ್ತು ತೆಗೆದುಹಾಕುವಿಕೆ, ಚುನಾವಣಾ ಪಟ್ಟಿಯ ಡೇಟಾಬೇಸ್‌ನ ನಿಯಂತ್ರಣ ಮತ್ತು SIR ಪ್ರಕ್ರಿಯೆಗೆ ಸಂಬಂಧಿಸಿದ ಗಂಭೀರ ಆಕ್ಷೇಪಗಳು.

ಹೊಸ ಮತದಾರರ ನೋಂದಣಿಗೆ ಬಳಸುವ ಈಅಂಡಿಟ-6ನಲ್ಲಿ ನಿಯಮಬದ್ಧ ಬದಲಾವಣೆ ಮಾಡದೆ ಹೊಸ ಪ್ರಶ್ನೆಯನ್ನು ಸೇರಿಸಿರುವುದನ್ನು ಚುನಾವಣಾ ಆಯುಕ್ತರೊಬ್ಬರು ಅನಧಿಕೃತ ಮತ್ತು ಕಾನೂನು ಬಾಹಿರ (unauthorised and illegal) ಎಂದು ಆಕ್ಷೇಪಿಸಿರುವುದಾಗಿ ವರದಿ ಹೇಳಿದೆ. ಮತ್ತೊಂದೆಡೆ, ಚುನಾವಣಾ ಪಟ್ಟಿಯ ಡೇಟಾಬೇಸ್ ಕ್ರಮೇಣ ಕೇಂದ್ರೀಕೃತವಾಗುತ್ತಿರುವ ಬಗ್ಗೆ ಹಾಗೂ ಕಾನೂನಿನ ಪ್ರಕಾರ ಅಧಿಕಾರ ಹೊಂದಿರುವ ಸ್ಥಳೀಯ ಚುನಾವಣಾಧಿಕಾರಿಗಳ ಪ್ರವೇಶವನ್ನು ನಿರ್ಬಂಧಿಸಲಾಗುತ್ತಿರುವ ಬಗ್ಗೆಯೂ ಬೆಳಕು ಚೆಲ್ಲಿದೆ

ಇದು ಅತ್ಯಂತ ಗಂಭೀರ ವಿಚಾರ. ಮತದಾರರ ಪಟ್ಟಿಯ ನಿರ್ವಹಣೆ ಒಂದು ಪಾರದರ್ಶಕ, ವಿಕೇಂದ್ರೀಕೃತ ಮತ್ತು ಕಾನೂನುಬದ್ಧ ಪ್ರಕ್ರಿಯೆಯಾಗಿರಬೇಕು. ಆದರೆ ಚುನಾವಣಾ ಆಯೋಗದ ಇಬ್ಬರು ಸದಸ್ಯರೇ ಡೇಟಾಬೇಸ್‌ನ ಹಂತಹಂತವಾದ ಕೇಂದ್ರೀಕರಣದ (gradual centralisation) ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಮತದಾರರ ಪಟ್ಟಿಯಂತಹ ಅತ್ಯಂತ ಸೂಕ್ಷ್ಮ ವ್ಯವಸ್ಥೆಯ ನಿಯಂತ್ರಣ ಯಾರ ಕೈಯಲ್ಲಿದೆ? ಯಾವ ಅಧಿಕಾರದ ಅಡಿಯಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತಿದೆ? ರಾಜ್ಯ ಮಟ್ಟದ ಕಾನೂನುಬದ್ಧ ಅಧಿಕಾರಿಗಳಿಗೆ ಸಂಪೂರ್ಣ ಪ್ರವೇಶ ಏಕೆ ಇಲ್ಲ? ಎಂಬ ಪ್ರಶ್ನೆಗಳಿಗೆ ಆಯೋಗ ಉತ್ತರ ನೀಡಬೇಕು.

ಪಶ್ಚಿಮ ಬಂಗಾಳದ ಖಖಖ ಪ್ರಕ್ರಿಯೆಯಲ್ಲೂ



ಇದೇ ರೀತಿಯ ಗಂಭೀರ ಪ್ರಶ್ನೆಗಳು ಎದ್ದಿವೆ. ನ್ಯಾಯಾಂಗ ಅಧಿಕಾರಿಗಳು ಮತದಾರರನ್ನು ಪಟ್ಟಿಗೆ ಸೇರಿಸಿದ ನಂತರ, ಅವರ ಸೇರ್ಪಡೆಯನ್ನು ರದ್ದುಮಾಡುವಂತೆ 16 ಲಕ್ಷ ಮೇಲ್ಮನವಿಗಳನ್ನು ಯಾರು ಸಲ್ಲಿಸಿದರು? ಯಾರ ಅನುಮತಿಯ ಮೇರೆಗೆ ಸಲ್ಲಿಸಿದರು? ಎಂಬ ಪ್ರಶ್ನೆಗಳನ್ನು ಚುನಾವಣಾ ಆಯುಕ್ತ ಸುಖಬೀರ್ ಸಿಂಗ್ ಸಂಧು ಅವರು ಸ್ವತಃ ಅಧಿಕಾರಿಗಳಿಗೆ ಕೇಳಿದ್ದಾರೆ ಎಂಬುದು ಈ ತನಿಖಾ ವರದಿಯ ಮೂಲಕ ಬಹಿರಂಗವಾಗಿದೆ. ಅವರ ಪ್ರಕಾರ ತಾವು & ಮತ್ತೊಬ್ಬ ಚುನಾವಣಾ ಆಯುಕ್ತರು ಹಾಗೂ ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾಧಿಕಾರಿಯೂ ಈ ಪ್ರಕ್ರಿಯೆಯ ಆಧಾರದ ಬಗ್ಗೆ ಮಾಹಿತಿ ಹೊಂದಿರಲಿಲ್ಲ.

ಇನ್ನೂ ಆತಂಕಕಾರಿ ಸಂಗತಿಯೆಂದರೆ, ಆಯೋಗದ ಇಬ್ಬರು ಸದಸ್ಯರು ತಮ್ಮ ಅನುಮತಿಯಿಲ್ಲದೆ ಚುನಾವಣಾ ಆಯೋಗದ ಹೆಸರಿನಲ್ಲಿ ಹಲವು ರೀತಿಯ ಸಂವಹನ ನಡೆಯುತ್ತಿರುವ, ನಿರ್ಧಾರ ಕೈಗೊಳ್ಳಲಾಗುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಚುನಾವಣಾ ಆಯೋಗದ ಕಾರ್ಯವೈಖರಿ ಸಂವಿಧಾನ ಮತ್ತು ಕಾನೂನಿನ ಪ್ರಕಾರ ಸಾಂಸ್ಥಿಕವಾಗಿರಬೇಕೇ ಹೊರತು ಒಬ್ಬ ವ್ಯಕ್ತಿಯ ನಿರ್ಧಾರಕ್ಕೆ ಸೀಮಿತವಾಗಬಾರದು. ಇಂತಹ ಬೆಳವಣಿಗೆಗಳ ನಡುವೆ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ನೇತೃತ್ವದ ಕಾರ್ಯವೈಖರಿಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಗಂಭೀರ ಪ್ರಶ್ನೆಗಳು ಉದ್ಭವಿಸಿರುವುದು ಸಹಜ.

ಚುನಾವಣಾ ಆಯೋಗ ಯಾರ ಪರವೂ ಇರಬಾರದು. ಅದು ಸಂವಿಧಾನದ ಪರ, ಮತದಾರನ ಪರ ಇರಬೇಕು. ಕೇಂದ್ರ ಸರ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಚುನಾವಣಾ ವ್ಯವಸ್ಥೆಯ ನಿಯಮಗಳು, ಮತದಾರರ ಪಟ್ಟಿಗಳು ಅಥವಾ ಚುನಾವಣಾ ಪ್ರಕ್ರಿಯೆಗಳು ಬದಲಾಗುತ್ತಿವೆ ಎಂಬ ಅನುಮಾನವೇ ಮೂಡದಂತೆ ಸಂಸ್ಥೆಯ ಸ್ವಾಯತ್ತತೆ ಮತ್ತು ಪಾರದರ್ಶಕತೆಯನ್ನು ಕಾಪಾಡುವ ಅಗತ್ಯ ಇಂದು ಇದೆ. ಇಂದು ದೇಶದ ಜನರಿಗೆ ಬೇಕಿರುವುದು ಚುನಾವಣಾ ಆಯೋಗದ ಮೇಲೆ ವಿಶ್ವಾಸ. ಆದರೆ ಆಯೋಗದೊಳಗೇ ಇಬ್ಬರು ಸದಸ್ಯರು ಪದೇಪದೇ ಆಕ್ಷೇಪ ವ್ಯಕ್ತಪಡಿಸುತ್ತಿರುವುದು ಜನರ ದೇಶದ ಚುನಾವಣಾ ಆಯೋಗ ಮತ್ತು ಚುನಾವಣಾ ಪ್ರಕ್ರಿಯೆಯ ಮೇಲೆ ವಿಶ್ವಾಸ ಕಳೆದುಕೊಳ್ಳುವಂತೆ ಮಾಡುತ್ತದೆ.

ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಸೋಲು ಅಥವಾ ಗೆಲುವು ಮುಖ್ಯವಲ್ಲ. ಮತದಾರರ ಪಟ್ಟಿಯಿಂದ ಒಬ್ಬ ಅರ್ಹ ನಾಗರಿಕನ ಹೆಸರನ್ನು ಅನ್ಯಾಯವಾಗಿ ತೆಗೆದುಹಾಕಿದರೂ ಅದು ಕೇವಲ ಒಂದು ಹೆಸರಿನ ಅಳಿಸುವಿಕೆಯಾಗಿರುವುದಿಲ್ಲ, ಅದು ಒಬ್ಬ ನಾಗರಿಕನ ಸಂವಿಧಾನಬದ್ಧ ಮತದಾನದ ಹಕ್ಕನ್ನು ಕಸಿದುಕೊಂಡಂತೆ ಆಗುತ್ತದೆ. ಇದು ಬರೀ ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ವಿಚಾರವಲ್ಲ, ಭಾರತದ ಭವಿಷ್ಯ ಮತ್ತು ಪ್ರಜಾಪ್ರಭುತ್ವದ ಅಳಿವು ? ಉಳಿವಿನ ಪ್ರಶ್ನೆ. ಹೀಗಾಗಿ ಚುನಾವಣಾ ಆಯೋಗದ ಇತ್ತೀಚಿನ ಕಾರ್ಯವೈಖರಿ, ಖಖಖ ಪ್ರಕ್ರಿಯೆ, ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳು ಮತ್ತು ಆಯೋಗದೊಳಗಿನ ಭಿನ್ನಾಭಿಪ್ರಾಯಗಳ ಕುರಿತು ಸಂಪೂರ್ಣ ಪಾರದರ್ಶಕತೆ, ಸಾರ್ವಜನಿಕ ವಿವರಣೆ ಮತ್ತು ಅಗತ್ಯವಿದ್ದರೆ ಸ್ವತಂತ್ರ ಪರಿಶೀಲನೆ ನಡೆಯಬೇಕು.

ಚುನಾವಣಾ ಆಯೋಗವು ಯಾವುದೇ ಸರ್ಕಾರವೊಂದರ ಕೈಗೊಂಬೆಯಾಗಬಾರದು. ಭಾರತದ ಪ್ರಜಾಪ್ರಭುತ್ವವನ್ನು ಬಲಪಡಿಸಲು, ಚುನಾವಣಾ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಕಾಪಾಡಲು ಮತ್ತು ಪ್ರತಿಯೊಬ್ಬ ಅರ್ಹ ಮತದಾರನ ಮತದಾನದ ಹಕ್ಕನ್ನು ರಕ್ಷಿಸಲು ಜವಾಬ್ದಾರಿಯಾಗಿರಬೇಕು. ಆಯೋಗವು ಈ ಕಾರ್ಯದಲ್ಲಿ ವಿಫಲವಾದರೆ ದೇಶದ ಪ್ರಜ್ಞಾವಂತ ಪ್ರಜೆಗಳಾದ ನಾವು ಧ್ವನಿ ಎತ್ತಲೇಬೇಕು, ಎತ್ತುತ್ತೇವೆ ಕೂಡ. ಆದ್ದರಿಂದ, ಚುನಾವಣಾ ಆಯೋಗದ ನಿರ್ಧಾರಗಳಲ್ಲಿ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರ ಸರ್ವಾಧಿಕಾರಿ ನಡೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಇಂತಹ ಅಧಿಕಾರಿಗಳಿಂದ ದೇಶದಲ್ಲಿ ಸ್ವತಂತ್ರ, ನಿಷ್ಪಕ್ಷಪಾತ, ಪಾರದರ್ಶಕ ಚುನಾವಣೆಗಳು ನಡೆಯಲು ಖಂಡಿತಾ ಸಾಧ್ಯವಿಲ್ಲ. ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರ ಸರ್ವಾಧಿಕಾರಿ ನಡೆಯಿಂದ ಮತದಾನದ ಸಾಂವಿಧಾನಿಕ ಹಕ್ಕಿಗೆ ಚ್ಯುತಿ ಬಂದಿದೆ.

ಇಂತಹ ಅಧಿಕಾರಿಗಳಿಂದ ದೇಶದಲ್ಲಿ ಸ್ವತಂತ್ರ, ನಿಷ್ಪಕ್ಷಪಾತ, ಪಾರದರ್ಶಕ ಚುನಾವಣೆಗಳು ನಡೆಯಲು ಖಂಡಿತಾ ಸಾಧ್ಯವಿಲ್ಲ. ಈ ಸಾಂವಿಧಾನಿಕ ದ್ರೋಹವನ್ನು ಗಂಭೀರವಾಗಿ ಪರಿಗಣಿಸಿ ಸಂವಿಧಾನದ ರಕ್ಷಕರಾಗಿರುವ ಸನ್ಮಾನ್ಯ ರಾಷ್ಟ್ರಪತಿಗಳು ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣವೇ ಪದಚ್ಯುತಗೊಳಿಸಿ ಅವರ ವಿರುದ್ಧ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ವಚನ ದರ್ಶನ

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ,ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ!ಕೂಡಲಸಂಗಮದೇವನಲ್ಲದೆ ಇಲ್ಲವೆಂದಿತ್ತು ವೇದ

ವಿಶ್ವಗುರು ಬಸವಣ್ಣನವರ ಪ್ರಸಿದ್ಧ ವಚನವಾಗಿದೆ. "ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ, ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ! ಕೂಡಲಸಂಗಮದೇವನಲ್ಲದೆ ಇಲ್ಲವೆಂದಿತ್ತು ವೇದ" ಎಂಬುದು ಇದರ ಪೂರ್ಣ ಸಾಲು. ಇಲ್ಲಿ "ಹುಬ್ಬಿ" ಎಂದರೆ "ಉಬ್ಬಿ" ಅಹಂಕಾರದಿಂದ ಅಥವಾ ಹೆಮ್ಮೆಯಿಂದ ಅಧಿಕವಾಗಿ ಎಂದರ್ಥ

ದೇವನೊಬ್ಬನೇ ದೇವರುಗಳು ಇಬ್ಬರು, ಮೂವರು ಇದ್ದಾರೆ ಎಂದು ಅಹಂಕಾರದಿಂದ ಅಥವಾ ಅತಿ ಉತ್ಸಾಹದಿಂದ ಉಬ್ಬಿ ಮಾತನಾಡಬಾರದು. ಜಗತ್ತನ್ನು ನಿಯಂತ್ರಿಸುವ ಶಕ್ತಿ ಕೇವಲ ಒಬ್ಬನೇ.

ಬಹುದೇವತಾರಾಧನೆ ತಪ್ಪು, ದೇವರುಗಳು ಹಲವರಿದ್ದಾರೆ ಎಂಬ ಕಲ್ಪನೆಯೇ ಸುಳ್ಳು ಹುಸಿ.

ವೇದದ ಸಾಕ್ಷಿ ನನ್ನ ಆರಾಧ್ಯ ದೈವನಾದ ಕೂಡಲಸಂಗಮದೇವನನ್ನು ಹೊರತುಪಡಿಸಿ ಈ ಸೃಷ್ಟಿಯಲ್ಲಿ ಬೇರೆ ಯಾವ ದೇವರೂ ಇಲ್ಲ ಎಂದು ವೇದಗಳೇ ಸಾರುತ್ತವೆ ಎಂದು ಬಸವಣ್ಣನವರು ಏಕದೇವೋಪಾಸನೆಯ ಮಹತ್ವವನ್ನು ಇಲ್ಲಿ ತಿಳಿಸಿದ್ದಾರೆ. ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಕರವೇ ನಾರಾಯಣಗೌಡರಿಂದ ದಸರಾ ಉದ್ಘಾಟನೆ ಮಾಡಿಸಿ : ಅಭಿಮಾನಿಗಳ ಮನವಿ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಅವರಿಂದ ಉದ್ಘಾಟನೆ ಮಾಡಿಸಬೇಕು ಎಂದು ಮಲ್ಟಿಸ್ಟಾರ್ ಶಿವರಾಜ್ ಕುಮಾರ್ ಅಭಿಮಾನಿಗಳ ಕ್ರೀಡಾ ಮತ್ತು ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕೆ. ಚಂದ್ರಶೇಖರ್ (ಚನ್ನ) ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.



ಈ ಕುರಿತು ಪತ್ರ ಬರೆದಿರುವ ಅವರು, ಕನ್ನಡ ನಾಡಿಗೆ ಯಾವುದೇ ತೊಂದರೆಯಾದರೂ ಮೊದಲು ಬೀದಿಗಿಳಿಯುವುದು ನಾರಾಯಣಗೌಡರು ಹಾಗೂ ಕರವೇ ಕಾರ್ಯಕರ್ತರು. ಆಂಗ್ಲ ನಾಮಫಲಕಗಳ ಹಾವಳಿ ತಗ್ಗಿಸುವಲ್ಲಿ ಇವರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದ್ದಾರೆ. ಕಳೆದ 40 ವರ್ಷಗಳಿಂದ ಕನ್ನಡ ನೆಲ, ಜಲ ಹಾಗೂ ಭಾಷೆಯ ಕುರಿತಂತೆ ಸಾವಿರಾರು ಹೋರಾಟಗಳಲ್ಲಿ ಪಾಲ್ಗೊಂಡು, ಈಗಲೂ ಕನ್ನಡಪರ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ನಾರಾಯಣಗೌಡರನ್ನು ಈ ವರ್ಷದ ನಾಡಹಬ್ಬ ದಸರಾ ಉದ್ಘಾಟನೆಗೆ ಆಹ್ವಾನಿಸಬೇಕು ಎಂದು ಚನ್ನ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

1ನೇ ಪುಟದಿಂದ....

ರಾಜ್ಯದ ಆರ್ಥಿಕತೆ ಹಳ್ಳ ಹಿಡಿದಿದ್ದು, ಸರ್ಕಾರ ಪಾಪರ್ ಆಗಿದೆ ಎಂದು ದೂರಿದ ಅವರು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಮನೆಗೆ ಹೋಗಬೇಕು ಎಂದು ಒತ್ತಾಯಿಸಿದರು.

ವಿಜಯೇಂದ್ರ ವಾಗ್ದಾಳಿ : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು, ಸರ್ಕಾರ ಐಸಿಯುನಲ್ಲಿದೆ, ದಿವಾಳಿಯಾಗಿದೆ. ಸರ್ಕಾರ ಜಾಹೀರಾತುಗಳನ್ನು ನೀಡುತ್ತಾ ಕಾಲ ಕಳೆಯುತ್ತಿದೆ ಎಂದು ಟೀಕಿಸಿದರು.

ವಿವಿಧ ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ನೀಡಲು ಹಣದ ಸಮಸ್ಯೆ ಎದುರಾಗಿದೆ. ಶಿಕ್ಷಕರ ನೇಮಕಾತಿಗೂ ಆರ್ಥಿಕ ತೊಂದರೆ ಎದು ರಾಗಿದೆ. ಉದ್ಯೋಗ ನೀಡುವಲ್ಲಿಯೂ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಹುಣಸಗಿ-ಸುರಪುರ ಮಹಿಳಾ ಘಟಕಕ್ಕೆ ಹೊಸ ಸಾರಥಿಗಳು

❑ ನೈಜ್ಯ ದೆಸೆ ನ್ಯೂಸ್

ಹುಣಸಗಿ: ಕನ್ನಡ ನಾಡು, ನುಡಿ, ನೆಲ ಹಾಗೂ ಜಲದ ರಕ್ಷಣೆಯ ಹೋರಾಟದಲ್ಲಿ ಮಹಿಳೆಯರನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ನಮ್ಮ ಕರ್ನಾಟಕ ಸೇನೆ (ನಕಸೇ) ಸಂಘಟನೆಯ ವತಿಯಿಂದ ಹುಣಸಗಿ ಹಾಗೂ ಸುರಪುರ ತಾಲೂಕುಗಳ ಮಹಿಳಾ ಘಟಕದ ನೂತನ ಪದಾಧಿಕಾರಿಗಳ ಸೇರ್ಪಡೆ ಹಾಗೂ ಆಯ್ಕೆ ಕಾರ್ಯಕ್ರಮ ಹುಣಸಗಿ ಪಟ್ಟಣದ ಗುಡ್ ಲಕ್ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ನಮ್ಮ ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷರಾದ ಎಂ. ಬಸವರಾಜ ಪಡುಕೋಟೆ ಅವರ ಆದೇಶದ ಮೇರೆಗೆ, ರಾಜ್ಯ ಪ್ರಧಾನ ಸಂಚಾಲಕರಾದ ಭೀಮಣ್ಣ ಶಖಾಪುರ ಅವರ ಅಧ್ಯಕ್ಷತೆಯಲ್ಲಿ ಹಾಗೂ ಯಾದಗಿರಿ ಜಿಲ್ಲಾಧ್ಯಕ್ಷರಾದ ವಿಶ್ವಾರಾಧ್ಯ ದಿಮ್ಮೆ ಅವರ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಹುಣಸಗಿ ಹಾಗೂ ಸುರಪುರ ತಾಲೂಕುಗಳ ಮಹಿಳಾ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಕು-ರಿತು ಚರ್ಚೆ ನಡೆಸಲಾಯಿತು. ಸಂಘಟನೆಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಮ್ಮುಖದಲ್ಲಿ ಹುಣಸಗಿ ತಾಲೂಕು ಮಹಿಳಾ ಅಧ್ಯಕ್ಷರಾಗಿ ಶ್ರೀಮತಿ ಶ್ರೀದೇವಿ ಮೆಟ್ಟಿ ಹಾಗೂ ಸುರಪುರ ತಾಲೂಕು ಮಹಿಳಾ ಅಧ್ಯಕ್ಷರಾಗಿ ಶ್ರೀಮತಿ ಸಂಗೀತಾ ಕೋತಿನ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.



ನೂತನವಾಗಿ ಆಯ್ಕೆಯಾದ ಮಹಿಳಾ ಅಧ್ಯಕ್ಷರಿಗೆ ಸಂಘಟನೆಯ ಮುಖಂಡರು ಅಭಿನಂದನೆ ಸಲ್ಲಿಸಿ, ಸಂಘಟನೆಯ ಜವಾಬ್ದಾರಿಯನ್ನು ಸಮರ್ಥ-'ವಾಗಿ ನಿರ್ವಹಿಸುವಂತೆ ಶುಭ ಹಾರೈಸಿದರು. ಮಹಿಳಾ ಶಕ್ತಿಗೆ ಸಂಘಟನೆಯ ಬಲ

ಸಭೆಯಲ್ಲಿ ಮಾತನಾಡಿದ ಮುಖಂಡರು, ಮಹಿಳೆಯರು ಕುಟುಂಬದ ಜವಾಬ್ದಾರಿಯ ಜೊತೆಗೆ ಸಮಾಜದ ಬೆಳವಣಿಗೆಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ ಮತ್ತು ನೆಲದ ವಿಚಾರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾದರೆ ಸಂಘಟನೆಯ ಹೋರಾಟಗಳಿಗೆ ಮತ್ತಷ್ಟು ಶಕ್ತಿ ದೊರೆಯಲಿದೆ ಎಂದು ಅಭಿಪ್ರಾಯಪಟ್ಟರು. ಕನ್ನಡ ನಾಡು, ನುಡಿ ಹಾಗೂ ನೆಲದ ರಕ್ಷಣೆಗಾಗಿ ಮಹಿಳಾ ಘಟಕವನ್ನು ತಾಲೂಕು, ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿ ಬಲಪಡಿಸಲಾಗುವುದು. ಕನ್ನಡಪರ ವಿಚಾರಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು, ಕನ್ನಡ ಭಾಷೆಯ ಬಳಕೆಗೆ ಉತ್ತೇಜನ ನೀಡುವುದು ಹಾಗೂ ಅಗತ್ಯ ಸಂದರ್ಭಗಳಲ್ಲಿ ಸಂಘಟಿತವಾಗಿ ಹೋರಾಟ ರೂಪಿಸುವಲ್ಲಿ ಮಹಿಳಾ ಘಟಕ ಮುಂಚೂಣಿಯಲ್ಲಿ ನಿಲ್ಲಲಿದೆ ಎಂದು ನಾಯಕರು ಆಶಯ ವ್ಯಕ್ತಪಡಿಸಿದರು.

ಯುವತಿಯರು ಮತ್ತು ಮಹಿಳೆಯರಿಗೆ ಹೆಚ್ಚಿನ ಅವಕಾಶ ಮಹಿಳಾ ಘಟಕದ ಮೂಲಕ ಯುವತಿಯರು ಹಾಗೂ ಮಹಿಳೆಯರಿಗೆ ಸಂಘಟನೆಯಲ್ಲಿ ಹೆಚ್ಚಿನ ಜವಾಬ್ದಾರಿಗಳನ್ನು ನೀಡುವ ಉದ್ದೇಶವಿದೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಮಹಿಳಾ ಘಟಕವನ್ನು ವಿಸ್ತರಿಸಿ, ಕನ್ನಡಪರ ಚಟುವಟಿಕೆಗಳು ಹಾಗೂ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಅವರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಂಘಟನೆ ಎಂದರೆ ಕೇವಲ ಹೋರಾಟಕ್ಕೆ ಸೀಮಿತವಾಗದೆ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವುದು,ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಕನ್ನಡದ ಬಗ್ಗೆ ಅಭಿಮಾನ ಬೆಳೆಸುವ ಕಾರ್ಯಗಳಲ್ಲಿಯೂ ತೊಡಗಿಸಿಕೊಳ್ಳಬೇಕು ಎಂದು ಮುಖಂಡರು ಕರೆ ನೀಡಿದರು.

ಪ್ರಮುಖರ ಉಪಸ್ಥಿತಿ ಕಾರ್ಯಕ್ರಮದಲ್ಲಿ ಮಹಿಳಾ ಜಿಲ್ಲಾಧ್ಯಕ್ಷರಾದ ಶ್ರೀದೇವಿ ಕಟ್ಟಿಮನಿ, ಹುಣಸಗಿ ತಾಲೂಕು ಅಧ್ಯಕ್ಷರಾದ ಭೀಮನಗೌಡ ಪೋ. ಪಾಟೀಲ, ಶಹಾಪುರ ತಾಲೂಕು ಅಧ್ಯಕ್ಷರಾದ ಸಿದ್ದು ಪಟ್ಟೇದಾರ, ಗುರುಮಠಕಲ್ ತಾಲೂಕು ಅಧ್ಯಕ್ಷರಾದ ಅಬ್ದುಲ್, ಸಂಗಮೇಶ ದೊರೆ ವಜ್ಜಲ್, ಭೀಮನಗೌಡ ಕಡದರಾಳ, ಅಂಬರೇಶನಾಯಕ ಬೈಲಕುಂಟಿ, ಶ್ರೀಶೈಲ ವಜ್ಜಲ್, ಕೆಂಭಾವಿ ಹೋಬಳಿ ಕಾರ್ಮಿಕ ಘಟಕದ ಅಧ್ಯಕ್ಷರಾದ ಗುರುರಾಜ ಅಂಗಡಿ, ರಂಗಣ್ಣ ವಡ್ಡರ (ಕಂದಿಲ್), ಹಣಮಂತ ದೂರಿ, ಅಂಬ-ರೀಶ ಸೊನ್ನಾಪುರ, ಪರಮಣ್ಣ ಗಿಂಡಿ ಹಾಗೂ ತಿರುಪತಿ ಸಿದ್ದಾಪುರ ಸೇರಿದಂತೆ ಹುಣಸಗಿ, ಸುರಪುರ ಹಾಗೂ ಸುತ್ತಮುತ್ತಲಿನ ತಾಲೂಕುಗಳ ವಿವಿಧ ಘಟಕಗಳ ಪ್ರಮುಖ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ನೂತನ ಮಹಿಳಾ ಪದಾಧಿಕಾರಿಗಳು ಸಂಘಟನೆಯ ಜವಾಬ್ದಾ-ರಿಗಳನ್ನು ಸ್ವೀಕರಿಸಿ, ಮುಂದಿನ ದಿನಗಳಲ್ಲಿ ಮಹಿಳಾ ಘಟಕವನ್ನು ಸಂಘಟನಾತ್ಮಕವಾಗಿ ಬಲಪಡಿಸುವುದಾಗಿ ತಿಳಿಸಿದರು. ಹುಣಸಗಿ ಮತ್ತು ಸುರಪುರ ತಾಲೂಕುಗಳಲ್ಲಿ ಮಹಿಳಾ ಘಟಕಕ್ಕೆ ಹೊಸ ಪದಾಧಿಕಾರಿಗಳ ಆಯ್ಕೆಯ ಮೂಲಕ ಸಂಘಟನೆಯ ಚಟುವಟಿ-ಕೆಗಳಿಗೆ ಹೊಸ ಚೈತನ್ಯ ದೊರೆತಿದ್ದು, ಮುಂದಿನ ದಿನಗಳಲ್ಲಿ ಕನ್ನಡಪರ ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ವೇದಿಕೆ ಸಿದ್ಧವಾದಂತಾಗಿದೆ.

ಸೆಪ್ಟೆಂಬರ್ 28 ರಿಂದ 30 ರವರೆಗೆ ಕೆಲವು ಬ್ಯಾಂಕ್ ನೌಕರರ ಸಂಘಟನೆಗಳಿಂದ ಮುಷ್ಕರ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಮುಷ್ಕರದ ಅವಧಿಯಲ್ಲಿ ಬ್ಯಾಂಕ್ ಶಾಖೆಗಳ ಸೇವೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿರುವುದರಿಂದ, ಬಾಕಿ ಇರುವ ಕೆಲಸಗಳನ್ನು ಮುಗಿಸಿಕೊಳ್ಳುವಂತೆ ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಸೂಚಿಸಿವೆ.

ಸೆಪ್ಟೆಂಬರ್‌ನ ಕೊನೆಯ ವಾರದಲ್ಲಿ ನಿಮ್ಮ ಬ್ಯಾಂಕಿಂಗ್‌ಗೆ ಸಂಬಂಧಿಸಿದ ಯಾವುದೇ ಪ್ರಮುಖ ಕೆಲಸಗಳಿದ್ದರೆ, ಅವುಗಳನ್ನು ಈಗಲೇ ಅಥವಾ ನಿಗದಿತ ಸಮಯಕ್ಕಿಂತ ಸ್ವಲ್ಪ ಮುಂಚಿತವಾಗಿಯೇ ಪೂರ್ಣಗೊಳಿಸುವುದು ಸೂಕ್ತ. ಮೂರು ದಿನಗಳ ಬ್ಯಾಂಕ್ ಮುಷ್ಕರಕ್ಕೆ ಕೆಲವೇ ದಿನಗಳು ಬಾಕಿಯಿದ್ದು, ಈ ಕು-



ರಿತ ಮಾತುಕತೆಗಳು ಇನ್ನೂ ಯಾವುದೇ ಪರಿಹಾರವನ್ನು ಕಂಡುಕೊಂಡಿಲ್ಲ. ವಾರದಲ್ಲಿ ಐದು ದಿನಗಳ ಕೆಲಸದ ಅವಧಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇ-ರಿಸುವಂತೆ ಒತ್ತಾಯಿಸುತ್ತಿರುವ 'ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್' (ಗಈಃಗ) ಮತ್ತು ಅದರ ಅಂಗಸಂಸ್ಥೆಗಳು, ತಮ್ಮ ಬೇಡಿಕೆಗಳು ಈಡೇರದಿದ್ದರೆ ಮುಷ್ಕರವನ್ನು ಮುಂದುವರಿಸಲು ನಿರ್ಧರಿಸಿವೆ.

ಮುಷ್ಕರ ಆರಂಭವಾಗುವ ಮುನ್ನವೇ ಪ್ರಮುಖ ವಹಿವಾಟುಗಳನ್ನು ಪೂರ್ಣಗೊಳಿಸುವಂತೆ ಬ್ಯಾಂಕ್‌ಗಳು ಗ್ರಾಹಕರಿಗೆ ಸಂದೇಶಗಳನ್ನು ಕಳುಹಿಸಲು ಪ್ರಾರಂಭಿಸಿವೆ. ಅದೇ ಸಮಯದಲ್ಲಿ, ದಿನನಿತ್ಯದ ವಹಿವಾಟುಗಳಿಗಾಗಿ ಮೊಬೈಲ್ ಮತ್ತು ಇಂಟ-ರ್ನೆಟ್ ಬ್ಯಾಂಕಿಂಗ್, ಯುಪಿಐ (ಗಕಖ) ಹಾಗೂ ಎಟಿಎಂ (ಂಖಿಒ)ಗಳಂತಹ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳನ್ನು ಬಳಸುವಂತೆಯೂ ಗ್ರಾಹಕರಿಗೆ ಸಲಹೆ ನೀಡಲಾಗಿದೆ.

ಮುಷ್ಕರವು ನಡೆದರೆ, ಆ ಅವಧಿಯಲ್ಲಿ ದೇಶಾದ್ಯಂತ ಬ್ಯಾಂಕ್ ಶಾಖೆಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರಬಹುದು; ಆದ್ದರಿಂದ ಗ್ರಾಹಕರು ತಮ್ಮ ಬ್ಯಾಂಕಿಂಗ್ ಅಗತ್ಯಗಳಿಗೆ ಸಂಬಂಧಿಸಿದಂತೆ ಮುಂಚಿತವಾಗಿಯೇ ಯೋಜನೆ ರೂಪಿಸಿಕೊಳ್ಳುವುದು ಮುಖ್ಯವಾಗಿದೆ.

ಸೆಪ್ಟೆಂಬರ್ 28 ರಿಂದ 30 ರವರೆಗೆ ಕೆಲವು ಬ್ಯಾಂಕ್ ನೌಕರರ ಸಂಘಟನೆಗಳು ನಡೆಸಲು ಉದ್ದೇಶಿಸಿರುವ ಮೂರು ದಿನಗಳ ಮುಷ್ಕರದ ಹಿನ್ನೆಲೆಯಲ್ಲಿ, ಬ್ಯಾಂಕ್‌ಗಳು ನಿನ್ನೆ ರಾತ್ರಿಯಿಂದಲೇ ಎಸ್-ಎಂಎಸ್ (ಖಒಖ) ಮೂಲಕ ಗ್ರಾಹಕರಿಗೆ ಮಾಹಿತಿ ನೀಡಲು ಪ್ರಾರಂಭಿಸಿವೆ. ಅಲ್ಲದೆ, ಎರಡನೇ ಶನಿವಾರ ಮತ್ತು ಭಾನುವಾರ ಬರುವುದರಿಂದ ಸೆಪ್ಟೆಂಬರ್ 26 ಮತ್ತು 27 ರಂದು ಕೂಡ ಬ್ಯಾಂಕ್‌ಗಳು ಮುಚ್ಚಿರಲಿವೆ.

ಆಡಳಿತ ಯಂತ್ರಕ್ಕೆ ಸರ್ಜರಿ : ಐಎಎಸ್ ಅಧಿಕಾರಿಗಳ ಎತ್ತಂಗಡಿ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯ ಸರ್ಕಾರ ಆಡಳಿತ ಯಂತ್ರಕ್ಕೆ ಇಂದು ಮಹತ್ವದ ಬದಲಾವಣೆ ಮಾಡಿದ್ದು, ಹಲವು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಯೋಜನೆ, ಕಾರ್ಯಕ್ರಮ ಸಂಂ-ಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಯಾಗಿದ್ದ ಡಾ. ಕೆ.ವಿ. ತ್ರಿಲೋಕಚಂದ್ರ ಅವರನ್ನು ಕೃಷಿ ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಇದುವರೆಗೆ ಕೃಷಿ ಇಲಾಖೆ ಕಾರ್ಯದರ್ಶಿಯಾಗಿದ್ದ ಕ್ಯಾಪ್ಟನ್ ರಾಜೇಂದ್ರ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಅವ-ರಿಗೆ ಯಾವುದೇ ಹೊಸ ಹುದ್ದೆ ತೋರಿಸಿಲ್ಲ. ಸಮಾಜ ಕಲ್ಯಾಣ ಇಲಾಖೆ ಆಯುಕ್ತರಾಗಿದ್ದ ಡಾ. ಕೆ. ರಾಕೇಶ್ ಕುಮಾರ್ ಅವರನ್ನು ಉಪಮುಖ್ಯಮಂತ್ರಿಗಳ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ. ಇದರೊಂದಿಗೆ ಸರ್ವೆ,



ಸೆಟ್ಲ್‌ಮೆಂಟ್ ಮತ್ತು ಭೂ ದಾಖಲೆಗಳ ಇಲಾಖೆಯ ಆಯುಕ್ತರ ಹೆಚ್ಚುವರಿ ಜವಾಬ್ದಾರಿಯನ್ನೂ ಅವರಿಗೆ ವಹಿಸಲಾಗಿದೆ. ಈ ಹುದ್ದೆಯಲ್ಲಿದ್ದ ಕೆ. ವೆಂಕಟರಾಜಾ ಅವರಿಗೂ ಹೊಸ ಸ್ಥಳ ನಿಯೋಜನೆ ಮಾಡಿಲ್ಲ.

ಪಂಚಾಯತ್ ರಾಜ್ ಇಲಾಖೆ ಆಯುಕ್ತರಾಗಿದ್ದ ಡಾ. ಅರುಂಧತಿ ಚಂದ್ರಶೇಖರ್ ಅವರನ್ನು ಖಜಾನೆ ಇಲಾಖೆಯ ಆಯುಕ್ತರನ್ನಾಗಿ ನೇಮಿಸಲಾಗಿದೆ. ಎಂಎಸ್‌ಎಂಇ ನಿರ್ದೇಶಕರಾಗಿದ್ದ ವೈ.ಎಸ್. ಪಾಟೀಲ ಅವರನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರಾಗಿ ವರ್ಗಾಯಿಸಲಾಗಿದ್ದು, ಪಂಚಾಯತ್ ರಾಜ್ ಆಯುಕ್ತ ಹಾಗೂ ಕರ್ನಾಟಕ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯನಿರ್ವಾಹಕ ನಿರ್ದೇಶಕರ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಂ. ಎಲ್. ವೈಶಾಲಿ ಅವರನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ. ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಶಿಧರ ಕುರೇರಾ ಅವರಿಗೆ ಹಟ್ಟಿ ಚಿನ್ನದ ಗಣಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆ ವಹಿಸಲಾಗಿದೆ.

ಕೊಡಗು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಆನಂದ ಪ್ರಕಾಶ ಮೀನಾ ಅವರನ್ನು ವಿಜಯಪುರ ಜಿಪಂ ಸಿಇಒ ಆಗಿ ವರ್ಗಾಯಿಸಲಾಗಿದೆ. ವಿಜಯಪುರ ಜಿಪಂ ಸಿಇಒ ರಿಷಿ ಆನಂದ್ ಅವರನ್ನು ಶಿವಮೊಗ್ಗ ಜಿಪಂ ಸಿಇಒ ಆಗಿ ನೇಮಿಸಲಾಗಿದೆ. ಶಿವಮೊಗ್ಗ ಜಿಪಂ ಸಿಇಒ ಎನ್. ಹೇಮಂತ್ ಅವರನ್ನು ಹುಬ್ಬಳ್ಳಿ ಹೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾಯಿಸಲಾಗಿದೆ. ಕೊಳ್ಳೇಗಾಲ ಉಪವಿಭಾಗಾಧಿಕಾರಿಯಾಗಿದ್ದ ದಿನೇಶ್ ಕುಮಾರ್ ಮೀನಾ ಅವರನ್ನು ಕೊಡಗು ಜಿಪಂನ ನೂತನ ಸಿಇಒ ಆಗಿ ನೇಮಿಸಲಾಗಿದೆ.

ದೇವತಗಲ್‌ನಲ್ಲಿ ಭಾವೈಕ್ಯತೆಯ ಗಣೇಶೋತ್ಸವ ಹಿಂದೂ ಮಹಾಗಣಪತಿ ಉತ್ಸವದ ಅಂಗವಾಗಿ ಬೃಹತ್ ರಕ್ತದಾನ ಶಿಬಿರ

ಹಿಂದೂ-ಮುಸ್ಲಿಂ ಯುವಕರಿಂದ ರಕ್ತದಾನ: ಸೌಹಾರ್ದತೆಗೆ ಸಾಕ್ಷಿಯಾದ ದೇವತಗಲ್

❑ ನೈಜ್ಯ ದೆಸೆ ನ್ಯೂಸ್

ದೇವತಗಲ್: ಗಣೇಶೋತ್ಸವದ ಸಂಭ್ರಮದ ಜೊತೆಗೆ ಸಾಮಾಜಿಕ ಕಳಕಳಿ ಮತ್ತು ಮಾನವೀಯತೆಯ ಸಂದೇಶ ಸಾರುವ ಮೂಲಕ ಸಮೀಪದ ದೇವತಗಲ್ ಗ್ರಾಮವು ಗಮನ ಸೆಳೆಯಿತು. ಗ್ರಾಮದ ಎರಡನೇ ವರ್ಷದ ಹಿಂದೂ ಮಹಾಗಣಪತಿ ಉತ್ಸವದ ಅಂಗವಾಗಿ ಸೆ.21ರಂದು ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರ ಯಶಸ್ವಿಯಾಗಿ ನಡೆಯಿತು.

ಗಣೇಶೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸಮಾಜಮುಖಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಗ್ರಾಮಸ್ಥರು ಹಾಗೂ ಯುವಕರು ಉತ್ತಮ ಸ್ಪಂದನೆ ನೀಡಿದರು. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶಿವರಾಜ್ ಕೋರಿ ಅವರು ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, “ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲ. ಅಗತ್ಯವಿರುವ ಸಂದರ್ಭದಲ್ಲಿ ಮತ್ತೊಬ್ಬರ ಜೀವ ಉಳಿಸಲು ರಕ್ತದಾನ ಅತ್ಯಂತ ಮಹತ್ವದ್ದಾಗಿದೆ. ಆರೋಗ್ಯವಂತ





ಯುವಕರು ನಿಯಮಿತವಾಗಿ ರಕ್ತದಾನ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು” ಎಂದು ಹೇಳಿದರು.

ಮೊದಲ ರಕ್ತದಾನ ಮಾಡಿದ ಕಸ್ತೂರಯ್ಯ ಸ್ವಾಮಿ ಶಿಬಿರದಲ್ಲಿ ಕಸ್ತೂರಯ್ಯ ಸ್ವಾಮಿ ಅವರು ಪ್ರಥ-'ಮವಾಗಿ ರಕ್ತದಾನ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅವರ ಬಳಿಕ ಗ್ರಾಮದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬಂದು ರಕ್ತದಾನ ಮಾಡಿದರು. ಒಟ್ಟು 51 ಮಂದಿ ಯುವಕರು ರಕ್ತದಾನ ಮಾಡುವ ಮೂಲಕ ಶಿಬಿರವನ್ನು ಯಶಸ್ವಿಗೊಳಿಸಿದರು. ರಕ್ತದಾನ ಮಾಡಿದ ಯುವಕರಿಗೆ ಆಯೋಜಕರು ಅಭಿನಂದನೆ ಸಲ್ಲಿಸಿದರು.

ರಕ್ತದಾನದಲ್ಲಿ ಹಿಂದೂ?ಮುಸ್ಲಿಂ ಯುವಕರ ಪಾಲ್ಗೊಳ್ಳುವಿಕೆ ಶಿಬಿರದ ಪ್ರಮುಖ ವಿಶೇಷವೆಂದರೆ ಹಿಂದೂ ಯುವಕರೊಂದಿಗೆ ಮುಸ್ಲಿಂ ಯುವಕರೂ ಸಹ ಉತ್ಸಾಹದಿಂದ ಪಾಲ್ಗೊಂಡು ರಕ್ತದಾನ ಮಾಡಿದ್ದು. ಧರ್ಮ, ಜಾತಿ ಹಾಗೂ ಸಮುದಾಯದ ಭೇದಗಳನ್ನು ಮೀರಿ ಮಾನವೀಯ ಸೇವೆಗೆ ಎಲ್ಲರೂ ಒಂದಾಗಿ ನಿಂತರು. ರಕ್ತದಾನ ಮಾಡುವ ಸಂದರ್ಭದಲ್ಲಿ ಯುವಕರು ಪರಸ್ಪರ ಸಹೋದರತ್ವದ ಭಾವನೆಯೊಂದಿಗೆ ಪಾಲ್ಗೊಂಡಿದ್ದು, ದೇವತಗಲ್‌ನಲ್ಲಿ ಬಹುಕಾಲದಿಂದ ಬೆಳೆದು ಬಂದಿರುವ ಸಾಮಾಜಿಕ ಸೌಹಾರ್ದತೆ ಮತ್ತು ಭಾವೈಕ್ಯತೆಯ ಪರಂಪರೆಗೆ ಮತ್ತಷ್ಟು ಬಲ ನೀಡಿತು.

“ರಕ್ತದ ಬಣ್ಣ ಒಂದೇ; ಜೀವ ಉಳಿಸುವ ಮಾನವೀಯತೆಯೂ ಒಂದೇ” ಎಂಬ ಸಂದೇಶವನ್ನು ಶಿಬಿರ ಸಾರಿತು. ಗಣೇಶೋತ್ಸವದ ಸಂದರ್ಭದಲ್ಲಿ ಆಯೋಜಿಸಲಾದ ಈ ಸಮಾಜಮುಖಿ ಕಾರ್ಯವು ಧಾರ್ಮಿಕ ಆಚರಣೆಗಳ ಜೊತೆಗೆ ಮಾನವೀಯ ಮೌಲ್ಯಗಳಿಗೂ ಆದ್ಯತೆ ನೀಡುವ ಮಾದರಿಯ ಕಾರ್ಯಕ್ರಮವಾಗಿ ಮೂಡಿಬಂತು. ಯುವಕರ ಸಾಮಾಜಿಕ ಕಳಕಳಿಗೆ ಮೆಚ್ಚುಗೆ ಗ್ರಾಮದ ಯುವಕರು ಒಗ್ಗೂಡಿ ರಕ್ತದಾನ ಶಿಬಿರ ಆಯೋಜಿಸಿರುವುದಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು. ಹಬ್ಬ-ಹರಿದಿನಗಳನ್ನು ಕೇವಲ ಸಂಭ್ರಮಕ್ಕೆ ಸೀಮಿತಗೊಳಿಸದೆ, ಸಮಾಜಕ್ಕೆ ಉಪಯುಕ್ತವಾಗುವ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಯುವಕರು ಇತರರಿಗೂ ಮಾದ-ರಿಯಾಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರಾದ ಸರ್ಪಭೂಷಣ ಪಾಟೀಲ್, ಶಶಿಕುಮಾರ್ ಸ್ವಾಮಿ, ಶಿವರಾಜ್ ಪಾಟೀಲ್, ಶಶಿಕುಮಾರ್ ಸಾಹುಕಾರ್ ಸೇರಿದಂತೆ ಹಿಂದೂ ಮಹಾಗಣಪತಿ ಸಮಿತಿಯ ಪದಾಧಿಕಾರಿಗಳು, ಸರ್ವ ಸದಸ್ಯರು, ಯುವಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ರಕ್ತದಾನಿಗಳಿಗೆ ಪ್ರೋತ್ಸಾಹ ನೀಡಿ, ಶಿಬಿರದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಹಿಂದೂ ಮಹಾಗಣಪತಿ ಸಮಿತಿ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು.

ಗಣೇಶೋತ್ಸವದ ಸಂಭ್ರಮದೊಂದಿಗೆ ರಕ್ತದಾನ, ಹಿಂದೂ?ಮುಸ್ಲಿಂ ಯುವಕರ ಸಹಭಾಗಿತ್ವ ಮತ್ತು ಮಾನವೀಯ ಸೇವೆಯ ಸಂದೇಶದ ಮೂಲಕ ದೇವತಗಲ್ ಗ್ರಾಮವು ಭಾವೈಕ್ಯತೆಯ ಗಣೇಶೋತ್ಸವಕ್ಕೆ ಸಾಕ್ಷಿಯಾಯಿತು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101